ವಿಜಯಪುರ | ಸಂಪುಟ 04 | ಸಂಚಿಕೆ 075 | ಪುಟ 04 | ₹ 3.00

https://udayarashminews.com

udayarashmi 90088 88340

# ಉದಯ ರಶ್ಮಿ

Udayarashmi Kannada Daily

ಜನಪರ-ಜೀವಪರ

ಕನ್ನಡ ದಿನಪತ್ರಿಕೆ

ಸಂಪಾದಕ : ಇಂದುಶೇಖರ ಮಣೂರ

Editor: Indushekhar Manur

editor.udayarashmi@gmail.com RNI NO: KARKAN/2023/86203 ಶುಕ್ರವಾರ, ಮೇ, 08, 2026



"ಮುಂಬರುವ ಯಾವುದೇ ಚುನಾವಣೆಯಲ್ಲಿ ನಾನು ಸ್ಪರ್ಧಿಸುವುದಿಲ್ಲ, ನನ್ನ ಮಕ್ಕಳು ಕೂಡ ಚುನಾವಣೆಯಲ್ಲಿ ಸ್ಪರ್ಧಿಸುವುದಿಲ್ಲ. ಅವರ ಶಕ್ತ್ಯಾನುಸಾರ ರಾಜಕೀಯದಲ್ಲಿ ಮುಂದುವರಿಯುತ್ತಾರೆ. ನಾನು ಸಹ ರಾಜಕೀಯದಲ್ಲಿ ಮುಂದುವರಿಯುತ್ತೇನೆ, ಆದರೆ ಚುನಾವಣೆಗೆ ಸ್ಪರ್ಧಿಸುವುದಿಲ್ಲ."

■ ಎಚ್ ವಿಶ್ವನಾಥ್
ಮಾಜಿ ಸಚಿವರು

## ಬೀಚನಹಳ್ಳಿ ಚಿಕ್ಕಣ್ಣರಿಗೆ ಟಿಕೆಟ್ ನೀಡಲು ವರಿಷ್ಠರ ಬಳಿಗೆ ನಿಯೋಗ



■ ಉದಯರಶ್ಮಿ ದಿನಪತ್ರಿಕೆ

**ಹೆಚ್ ಡಿ ಕೋಟೆ ತಾಲೂಕು ನಾಯಕ ಸಮಾಜದ ಪ್ರಧಾನ ಕಾರ್ಯದರ್ಶಿ ಚಾಕಹಳ್ಳಿ ಕೃಷ್ಣ ಹೇಳಿಕೆ**

ಹೆಚ್ ಡಿ ಕೋಟೆ: ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ಸ್ಥಳೀಯ ನಾಯಕರಿಗೆ ಮೊದಲ ಆದ್ಯತೆ ನೀಡಬೇಕೆಂದು, ಅದರಲ್ಲೂ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯ ನಾಯಕರಿಗೆ ಮೊದಲ ಪ್ರಾಶಸ್ತ್ಯ ನೀಡಬೇಕೆಂದು ಮೊನ್ನೆ ನಡೆದ ನಾಯಕ ಸಮುದಾಯದ ಸಭೆಯಲ್ಲಿ ಒಮ್ಮತದ ನಿರ್ಣಯ ತೆಗೆದುಕೊಳ್ಳಲಾಗಿದ್ದು, ಶೀಘ್ರದಲ್ಲೇ ವರಿಷ್ಠರನ್ನು ಭೇಟಿ ಮಾಡಿ ಮನವಿ ಮಾಡುತ್ತೇವೆ ಎಂದು ತಾಲೂಕು ನಾಯಕ ಸಮಾಜದ ಪ್ರಧಾನ ಕಾರ್ಯದರ್ಶಿ ಚಾಕಹಳ್ಳಿ ಕೃಷ್ಣ ಹೇಳಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಾಜಿ ಶಾಸಕ ಬೀಚನಹಳ್ಳಿ ಚಿಕ್ಕಣ್ಣ ಅವರು, ನಮ್ಮ ಸಮುದಾಯದ ಹಿರಿಯ ನಾಯಕರು. ಶಾಸಕರಾಗಿ ತಾಲೂಕಿಗೆ ಅನೇಕ ಕೊಡುಗೆಗಳನ್ನು ನೀಡಿದ್ದಾರೆ. ಎಸ್ಟಿ ಪ್ರಮಾಣಪತ್ರ ಗೊಂದಲ ಸರಿಪಡಿಸಲು ಮಾಜಿ ಶಾಸಕ ಬೀಚನಹಳ್ಳಿ ಚಿಕ್ಕಣ್ಣ, ದೊಡ್ಡನಾಯಕ, ದಿವಂಗತ ಚಿಕ್ಕಮಾದು, ಅಪ್ಪಣ್ಣ, ಸಿದ್ದರಾಜು, ಬಸವರಾಜು, ರಾಮಚಂದ್ರ ಸೇರಿದಂತೆ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯ ಎಸ್ಟಿ ಸಮುದಾಯದ ನಾಯಕರು ಹೋರಾಟ ನಡೆಸಿದ್ದಾರೆ. ಹೆಚ್ ಡಿ ಕೋಟೆ ಹಾಗು ಸರಗೂರು ತಾಲೂಕಿನಲ್ಲಿ ಸ್ಥಳೀಯ ಮಟ್ಟದಲ್ಲಿ ಏನೇ ಸಮಸ್ಯೆಗಳು ಎದುರಾದರೂ ಅವುಗಳನ್ನು ಬಗೆಹರಿಸುವುದು ಸ್ಥಳೀಯ ನಾಯಕರಾಗಿರುವ ಬೀಚನಹಳ್ಳಿ ಚಿಕ್ಕಣ್ಣ ಅವರೇ ಹೊರತು ಹೊರಗಿನ ಜಿಲ್ಲೆಯವರಲ್ಲ. ಹೀಗಾಗಿ ಸ್ಥಳೀಯರಿಗೆ ಟಿಕೆಟ್ ನೀಡಬೇಕೆಂದು ಮನವಿ ಮಾಡುತ್ತೇವೆ ಎಂದು ಚಾಕಹಳ್ಳಿ ಕೃಷ್ಣ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಜಿಯಾರ ನಾಗನಾಯಕ, ಆಶ್ರಯ ಸಮಿತಿಯ ಸದಸ್ಯ ಕೋಟೆ ಕೃಷ್ಣ, ಮುಖಂಡರಾದ ನಿಂಗನಾಯಕ, ಮೆಕ್ಯಾನಿಕ್ ಸೂರಿ, ರಘು, ಇದ್ದರು.

"ಮಾಜಿ ಶಾಸಕ ಬೀಚನಹಳ್ಳಿ ಚಿಕ್ಕಣ್ಣ ಅವರು ಜೆಡಿಎಸ್ ಪಕ್ಷ ಬಿಟ್ಟು ಎಲ್ಲೂ ಹೋಗಿಲ್ಲ. ಈಗಲೂ ಪಕ್ಷದಲ್ಲಿದ್ದು, ಮುಂಬರುವ ವಿಧಾನಸಭೆ ಚುನಾವಣೆಗೆ ಎನ್ ಡಿಎ ಅಭ್ಯರ್ಥಿಯಾಗಿ ಸ್ಪರ್ಧೆ ಮಾಡಲಿದ್ದಾರೆ. ಇದರಲ್ಲಿ ಯಾವುದೇ ಅನುಮಾನ ಇಲ್ಲ. ಜನರೊಂದಿಗೆ ಜನತಾದಳ ಸಮಾವೇಶ ಸೇರಿದಂತೆ ಪಕ್ಷದ ಅಡಿಯಲ್ಲಿ ನಡೆದ ಕೆಲ ಕಾರ್ಯಕ್ರಮಗಳಿಗೆ ಸ್ಥಳೀಯ ಮುಖಂಡರು ಆಹ್ವಾನ ನೀಡದ ಹಿನ್ನೆಲೆ ಬೀಚನಹಳ್ಳಿ ಚಿಕ್ಕಣ್ಣ ಅವರು ಭಾಗವಹಿಸಿರಲಿಲ್ಲ. ಅಂದ ಮಾತ್ರಕ್ಕೆ ಜೆಡಿಎಸ್ ನಿಂದ ಚಿಕ್ಕಣ್ಣ ದೂರವಾಗಿದ್ದಾರೆ ಅನ್ನೋದು ಶುದ್ಧ ಸುಳ್ಳು."

■ ಚಾಕಹಳ್ಳಿ ಕೃಷ್ಣ
ಜೆಡಿಎಸ್ ಮುಖಂಡರು

## ಶಾಸಕರ ಪಕ್ಷಾಂತರಕ್ಕೆ ಕಠಿಣ ನಿಯಮ ಜಾರಿಗೆ ಚಿಂತನೆ

### ಪಕ್ಷಾಂತರ ವಿರೋಧಿ ಸಮಿತಿ ಚಿಂತನೆ | ಪಕ್ಷಾಂತರ ಮಾಡಿದರೆ ಸಚಿವ ಸ್ಥಾನ, ಮತದಾನ ಹಕ್ಕು ಕೂಡ ನಿರಾಕರಣೆ?



ಬೆಂಗಳೂರು: ಪಕ್ಷಗಳಿಂದ ಹೊರಹೋಗುವ ಅಥವಾ ಪಕ್ಷಾಂತರ ಮಾಡುವ ಶಾಸಕರ ವಿರುದ್ಧ ಶೀಘ್ರದಲ್ಲೇ ಇನ್ನಷ್ಟು ಕಠಿಣ ಕ್ರಮಗಳು ಜಾರಿಯಾಗುವ ಸಾಧ್ಯತೆ ಇದೆ. ಅವಿಶ್ವಾಸ ನಿರ್ಣಯದ ವೇಳೆ ಮತದಾನದ ಹಕ್ಕು ಕಳೆದುಕೊಳ್ಳುವುದು ಹಾಗೂ ಸಚಿವ ಸ್ಥಾನ ಸೇರಿದಂತೆ ಲಾಭದಾಯಕ ಸರ್ಕಾರಿ ಹುದ್ದೆಗಳನ್ನು ವಹಿಸುವುದರಿಂದ ಅನರ್ಹಗೊಳ್ಳುವಂತಹ ಶಿಕ್ಷೆಗಳು ವಿಧಿಸುವ ಬಗ್ಗೆ ರಾಷ್ಟ್ರೀಯ ಮಟ್ಟದ ಸಮಿತಿ ಚರ್ಚೆ ನಡೆಸುತ್ತಿದೆ.

ಸಂವಿಧಾನದ 10ನೇ ಅನುಸೂಚನೆ (ಪಕ್ಷಾಂತರ ನಿಷೇಧ ಕಾನೂನು) ಕುರಿತ ಸುಧಾರಣೆಗಳನ್ನು ಪರಿಶೀಲಿಸುತ್ತಿರುವ ಸಮಿತಿ ಜೂನ್ ತಿಂಗಳಲ್ಲಿ ರಾಜ್ಯದಲ್ಲಿ ಅಂತಿಮ ಸಭೆ ನಡೆಸಿ ತನ್ನ ವರದಿಯನ್ನು ಲೋಕಸಭಾಧ್ಯಕ್ಷ ಓಂ ಬಿರ್ಲಾ ಅವರಿಗೆ ಸಲ್ಲಿಸಲಿದೆ ಎಂದು ತಿಳಿಸಿದ್ದಾರೆ.

ಈ ಸಮಿತಿಗೆ ರಾಹುಲ್ ನರ್ವೇಕರ್ ಅಧ್ಯಕ್ಷತೆ ವಹಿಸಿದ್ದು, ಪಕ್ಷಾಂತರ ನಿಷೇಧ ಕಾಯ್ದೆಯನ್ನು ಬಲಪಡಿಸಲು ಅಗತ್ಯ ಕ್ರಮಗಳನ್ನು ಶಿಫಾರಸು ಮಾಡಲು ಫೆಬ್ರವರಿಯಲ್ಲಿ ರಚಿಸಲಾಗಿತ್ತು. ಯು ಟಿ ಖಾದರ್ ಅವರೊಂದಿಗೆ ಸುರಮ ಪಾದಿ ಹಾಗೂ ಶರಿಂಗೈನ್ ಲಾಂಗ್ ಕುಮೆರ್ ಸಮಿತಿಯ ಸದಸ್ಯರಾಗಿದ್ದಾರೆ.

ಈ ಹಿಂದೆ ಮುಂಬೈ ಮತ್ತು ಪುರಿಯಲ್ಲಿ ನಡೆದ ಸಭೆಗಳಲ್ಲಿ ಪ್ರಮುಖವಾಗಿ ಚರ್ಚಿಸಲಾದ ಪ್ರಸ್ತಾವನೆಗಳಲ್ಲಿ, ಪಕ್ಷಾಂತರ ಮಾಡಿದ ಶಾಸಕರಿಗೆ ಅವಿಶ್ವಾಸ ನಿರ್ಣಯದ ವೇಳೆ ಮತದಾನದ ಹಕ್ಕು ನಿರಾಕರಿಸುವುದು ಪ್ರಮುಖವಾಗಿದೆ. ರಾಜಕೀಯ ಪಕ್ಷಾಂತರಗಳ ಮೂಲಕ ಸರ್ಕಾರಗಳನ್ನು ಉರುಳಿಸುವ ಪ್ರಯತ್ನಗಳನ್ನು ತಡೆಯುವ ಉದ್ದೇಶ ಇದಾಗಿದೆ.

ಇದರ ಜೊತೆಗೆ, ಪಕ್ಷಾಂತರ ಮಾಡಿದವರು ಹೊಸ ಸರ್ಕಾರದಲ್ಲಿ ಸಚಿವರಾಗುವುದು, ಮಂಡಳಿ ಮತ್ತು ನಿಗಮಗಳ ಅಧ್ಯಕ್ಷರಾಗುವುದು ಅಥವಾ ಯಾವುದೇ ಲಾಭದಾಯಕ ಹುದ್ದೆ ವಹಿಸುವುದನ್ನು ನಿಷೇಧಿಸುವ ಪ್ರಸ್ತಾವನೆಯೂ ಪರಿಗಣನೆಯಲ್ಲಿದೆ.

ಇನ್ನೊಂದು ಮಹತ್ವದ ಸುಧಾರಣೆಯಾಗಿ, ಪಕ್ಷ ವಿಭಜನೆಯ ಸಂದರ್ಭದಲ್ಲಿ ನಿಜವಾದ ರಾಜಕೀಯ ಪಕ್ಷ ಯಾವುದು ಎಂಬ ವಿವಾದಗಳನ್ನು ತೀರ್ಮಾನಿಸಲು ಪ್ರತ್ಯೇಕ ನ್ಯಾಯಮಂಡಳಿ ರಚಿಸುವ ಕುರಿತು ಚರ್ಚೆ ನಡೆಯುತ್ತಿದೆ. ಇದರಿಂದ ವಿಧಾನಸಭಾಧ್ಯಕ್ಷರ ಮೇಲಿನ ಒತ್ತಡ ಕಡಿಮೆಯಾಗಲಿದೆ.

ಶಾಸಕರಿಗೆ ಬಾಧ್ಯತೆಯ ನಿರ್ದೇಶನ ನೀಡುವಲ್ಲಿ ಪಕ್ಷದ ವಿಪ್ ಮತ್ತು ವಿಧಾನಮಂಡಲ ಪಕ್ಷದ ಮುಖ್ಯ ವಿಪ್‌ಗಳ ಅಧಿಕಾರದ ಬಗ್ಗೆ ಸ್ಪಷ್ಟತೆ ತರಬೇಕೆಂಬ ವಿಚಾರವನ್ನೂ ಸಮಿತಿ ಪರಿಶೀಲಿಸುತ್ತಿದೆ.

ಅನರ್ಹತಾ ಅರ್ಜಿಗಳ ತೀರ್ಮಾನದಲ್ಲಿ ಆಗುತ್ತಿರುವ ವಿಳಂಬವನ್ನು ತಪ್ಪಿಸಲು, ಪಕ್ಷಾಂತರ ಮಾಡಿದ ಸದಸ್ಯರ ವಿರುದ್ಧದ ಅರ್ಜಿಗಳನ್ನು ತೀರ್ಮಾನಿಸಲು ಕಾನೂನುಬದ್ಧ ಸಮಯ ಮಿತಿಯನ್ನು ನಿಗದಿಪಡಿಸುವ ಸಾಧ್ಯತೆಯನ್ನೂ ಸಮಿತಿ ಪರಿಶೀಲಿಸುತ್ತಿದೆ.



"ಪ್ರತಿ ರಾಜ್ಯದಲ್ಲೂ ವಿಭಿನ್ನ ನಿಯಮಗಳು ಮತ್ತು ವಿಧಾನಗಳಿದ್ದರೂ, ಸುಮಾರು 80 ಶೇಕಡಾ ನಿಯಮಗಳು ಒಂದೇ ರೀತಿಯವಾಗಿವೆ. ಉತ್ತಮ ಪದ್ಧತಿಗಳನ್ನು ಪರಿಶೀಲಿಸಿ ಸಾಮಾನ್ಯ ನಿಯಮಗಳು ಮತ್ತು ವಿಧಾನಗಳನ್ನು ಶಿಫಾರಸು ಮಾಡುತ್ತೇವೆ. ವರದಿಯನ್ನು ಆರು ತಿಂಗಳೊಳಗೆ ಸಲ್ಲಿಸಲಾಗುವುದು."

■ ಯು ಟಿ ಖಾದರ್
ಸ್ಪೀಕರ್, ವಿಧಾನಸಭೆ

ಈ ಪ್ರಕ್ರಿಯೆ ವರ್ಷಗಳ ಕಾಲ ಸಾಗುತ್ತದೆ. ಇದನ್ನು ಮೂರರಿಂದ ಆರು ತಿಂಗಳೊಳಗೆ ಮುಗಿಸುವಂತೆ ನಿಗದಿ ಮಾಡಲು ಆಶಿಸುತ್ತಿದ್ದೇವೆ ಎಂದು ಯು ಟಿ ಖಾದರ್ ಹೇಳಿದರು.

ಉತ್ತರ ಪ್ರದೇಶ ವಿಧಾನಸಭಾಧ್ಯಕ್ಷರ ನೇತೃತ್ವದ 'ನಿಯಮಗಳು ಮತ್ತು ವಿಧಾನಗಳು' ಕುರಿತ ಮತ್ತೊಂದು ಸಮಿತಿ ಮೇ 12 ಮತ್ತು 13ರಂದು ಮೈಸೂರಿನಲ್ಲಿ ಸಭೆ ನಡೆಸಲಿದೆ. ವಿವಿಧ ರಾಜ್ಯ ವಿಧಾನಸಭೆಗಳಲ್ಲಿ ಏಕರೂಪ ನಿಯಮಗಳನ್ನು ಜಾರಿಗೊಳಿಸುವ ಸಾಧ್ಯತೆಗಳನ್ನು ಈ ಸಮಿತಿ ಪರಿಶೀಲಿಸಲಿದೆ.

ಈ ಸಮಿತಿಯಲ್ಲಿ ಹಿಮಾಚಲ ಪ್ರದೇಶ, ಕರ್ನಾಟಕ, ಮಹಾರಾಷ್ಟ್ರ, ನಾಗಾಲ್ಯಾಂಡ್ ಮತ್ತು ದೆಹಲಿ ವಿಧಾನಸಭಾಧ್ಯಕ್ಷರು ಸದಸ್ಯರಾಗಿದ್ದಾರೆ.

## ಬಾರದ ವೇತನದಿಂದ ಎಸ್‌ಎಸ್‌ಎ ಶಿಕ್ಷಕರು ಹೈರಾಣ

■ ಉದಯರಶ್ಮಿ ದಿನಪತ್ರಿಕೆ

**ವೇತನ ಬಿಡುಗಡೆಗೆ ಆಗ್ರಹಿಸಿ ನೌಕರರ ಸಂಘದಿಂದ ಬಿಇಓ ಅವರಿಗೆ ಮನವಿ**



ವಿಜಯಪುರ: ಅಖಂಡ ವಿಜಯಪುರ ಗ್ರಾಮೀಣ ಶೈಕ್ಷಣಿಕ ತಾಲ್ಲೂಕಿನಲ್ಲಿ ಎಸ್‌ಎಸ್‌ಎ ಯೋಜನೆಯಡಿ ಸೇವೆ ಸಲ್ಲಿಸುತ್ತಿರುವ ಶಿಕ್ಷಕರ ಮಾರ್ಚ್ ಹಾಗೂ ಏಪ್ರಿಲ್ ತಿಂಗಳ ವೇತನ ಆಗದೇ ಇರುವದರಿಂದ ಸಂಕಷ್ಟ ಅನುಭವಿಸುತ್ತಿದ್ದು, ತಿಕೋಟಾ ತಾಲ್ಲೂಕ ನೌಕರರ ಸಂಘದ ಅಧ್ಯಕ್ಷ ಚನ್ನಯ್ಯ ಮಠಪತಿ ಅವರ ತಂಡದಿಂದ ವೇತನ ಬಿಡುಗಡೆಗೆ ಆಗ್ರಹಿಸಿ ಬಿಇಓ ಬಸವರಾಜ ತಳವಾರ ಅವರಿಗೆ ಬುಧವಾರ ಮನವಿ ಸಲ್ಲಿಸಿದರು.

ಮನವಿ ಸಲ್ಲಿಸಿ ಮಾತನಾಡಿದ ಮಠಪತಿ ಎರಡು ತಿಂಗಳಿನಿಂದ ವೇತನ ಇಲ್ಲದೇ ಶಿಕ್ಷಕರು ಪರದಾಡುವಂತಾಗಿದೆ. ಮಕ್ಕಳ ಶಾಲಾ ಶುಲ್ಕ, ಮನೆ ಬಾಡಿಗೆ, ಸಾಲದ ಕಂತುಗಳು, ಸಂಸಾರಿಕ ಖರ್ಚು ನಿಭಾಯಿಸಲಿಕ್ಕೆ ಆಗದೇ ಸಂಕಷ್ಟ ಎದು-ರಿಸುತ್ತಿದ್ದಾರೆ. ಯಾವುದೇ ತಾಂತ್ರಿಕ ಸಮಸ್ಯೆ ಅಥವಾ ಬಜೆಟ್ ಸಮಸ್ಯೇ ಏನೇ ಇದ್ದರು ಈ ವಾರದೊಳಗೆ ವೇತನ ಪಾವತಿ ಮಾಡಬೇಕು. ಇಲ್ಲದಿದ್ದರೆ ಕಛೇರಿ ಮುಂದೆ ನೌಕರರ ಸಂಘದ ವತಿಯಿಂದ ವೇತನಕ್ಕಾಗಿ ಪ್ರತಿಭಟನೆಗೆ ಧರಣಿ ಕೂಡಲಾಗುವುದು ಎಂದು ಹೇಳಿದರು.

ಜಿಲ್ಲಾ ನೌಕರರ ಸಂಘದ ಕ್ರೀಡಾ ಕಾರ್ಯದರ್ಶಿ ನೀಜು ಮೇಲಿನಕೇರಿ ಮಾತನಾಡಿ ಎಸ್‌ಎಸ್‌ಎ ಶಿಕ್ಷಕರು ರಜೆಯಲ್ಲಿ ಕುಟುಂಬ ಸದಸ್ಯರೊಂದಿಗೆ ನೆಮ್ಮದಿಯಿಂದ ಇರಲು ಆಗುತ್ತಿಲ್ಲ. ಏನೇ ಸಮಸ್ಯೆ ಇದ್ದರೂ ಬೇಗನೆ ಇತ್ಯರ್ಥ ಮಾಡಿ ವೇತನ ಮಾಡಬೇಕೆಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ನಿಕಟಪೂರ್ವ ಪ್ರಧಾನ ಕಾರ್ಯದರ್ಶಿ ಜಗದೀಶ ಬೋಳಸೂರ, ಎಂ.ಆರ್. ಮರ್ತೂರ, ಇಮಾಮ್ ಸಾದಿಕ್ ನಿಂಬಾಳಕರ ಇದ್ದರು.

## ವಿಷ ಪದಾರ್ಥ ಸೇವನೆಗೆ ಯತ್ನಿಸಿದ ರೈತನಿಗೆ ಸೂಕ್ತ ಚಿಕಿತ್ಸೆ

### ವಿಷ ಸೇವಿಸಲೆತ್ನಿಸಿದ ಜಮೀನಿನ ಮಾಲೀಕನ ಆರೋಗ್ಯ ಸ್ಥಿರ | ಜಿಲ್ಲಾಧಿಕಾರಿ ಡಾ. ಆನಂದ ಕೆ. ಹೇಳಿಕೆ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ಟವರ್ ನಿರ್ಮಾಣ ಕಾಮಗಾರಿ ಆರಂಭಿಸಲು ಅಧಿಕಾರಿಗಳು ಜಮೀನಿಗೆ ತೆರಳಿದಾಗ ಅಧಿಕಾರಿಗಳು ಹಾಗೂ ಗ್ರಾಮಸ್ಥರ ಸಮ್ಮುಖದಲ್ಲಿ ವಿಷ ಪದಾಥ-ರ್ ಸೇವಿಸಲು ಯತ್ನಿಸಿದ ಜಮೀನಿನ ಮಾಲೀಕನಿಗೆ ಸೂಕ್ತ ಚಿಕಿತ್ಸೆ ಹಾಗೂ ನಿಗಾ ವಹಿಸಲಾಗಿದೆ ಎಂದು ಜಿಲ್ಲಾಧಿಕಾರಿಗಳಾದ ಡಾ. ಆನಂದ ಕೆ. ಅವರು ತಿಳಿಸಿದ್ದಾರೆ.

ಕೇಂದ್ರ ಸರ್ಕಾರದ ಇಂಧನ ಇಲಾಖೆಯ ವ್ಯಾಪ್ತಿಯ ಕೇಂದ್ರೀಯ ವಿದ್ಯುಚ್ಛಕ್ತಿ ಪ್ರಾಧಿಕಾರದಡಿ ಬರುವ ನರೇಂದ್ರ ಹೊಸ ಸ್ವೀಕರಣಾ (ಕೂಡಗಿ) ಕೇಂದ್ರದಿಂದ ಪುಣೆ (ಜಿ.ಐ.ಎಸ್) ಸ್ವಿಕರಣಾ ಕೇಂದ್ರದವರೆಗೆ 765 ಕೆ.ವಿ. ಪ್ರಸರಣ ಮಾರ್ಗ ನಿರ್ಮಿಸುವ ಕಾಮಗಾರಿಗೆ ನಡೆದಿತ್ತು.

ಈ ವಿಷಯಕ್ಕೆ ಸಂಬಂಧಿಸಿದಂತೆ ಜಿಲ್ಲೆಯ ಬಸವನ ಬಾಗೇವಾಡಿ, ಬಬಲೇಶ್ವರ, ತಿಕೋಟಾ ಹಾಗೂ ಕೋಲಾರ ತಾಲೂಕುಗಳಲ್ಲಿ ಟವರ್ ನಿರ್ಮಾಣ ಹಾಗೂ ವಿದ್ಯುತ್ ತಂತಿ ಅಳವಡಿಸುವ ಕಾಮಗಾರಿಗಳು ನಡೆಯುತ್ತಿವೆ. ಒಟ್ಟು 177 ಸ್ಥಳಗಳಲ್ಲಿ ಟವರ್ ನಿರ್ಮಾಣದ ಅಡಿಪಾಯ ಕಾಮಗಾರಿಗಳನ್ನು ಗುರುತಿಸಲಾಗಿದ್ದು, ಅವುಗಳಲ್ಲಿ 168 ಸ್ಥಳಗಳಲ್ಲಿ ಟವರ್ ನಿರ್ಮಾಣದ ಅಡಿಪಾಯ ಕಾಮಗಾರಿಗಳು ಸಂಪೂರ್ಣವಾಗಿ ಮುಗಿದಿವೆ. ಉಳಿದ ಸ್ಥಳಗಳಲ್ಲಿ ಕಾಮಗಾರಿಗಳು ಪ್ರಗತಿಯಲ್ಲಿವೆ.

ಕೊಲ್ಹಾರ ತಾಲೂಕಿನ ತಳೇವಾಡ ಗ್ರಾಮದಲ್ಲಿ ಸ.ನಂ. 161/2 ರಲ್ಲಿ ಮಲ್ಲನಗೌಡ ಹಣಮಂತಗೌಡ ಬಿರಾದಾರ ಅವರ ಜಮೀನಿನಲ್ಲಿ ಸುಮಾರು ಎರಡೂವರೆ ಗುಂಟೆಯಲ್ಲಿ ಟವರ್ ಕಾರಿಡಾರ್ ನಿರ್ಮಾಣಕ್ಕಾಗಿ ನಿಯಮಾನುಸಾರ 8,96,236.00 ಪರಿಹಾರ ಧನ ನಿಗದಿಪಡಿಸಲಾಗಿತ್ತು. ಟವರ್ ನಿರ್ಮಾಣ ಅಡಿಪಾಯ ಕಾಮಗಾರಿಯೂ ಮುಗಿದಿತ್ತು.

ಹೀಗಾಗಿ ಬುಧವಾರ ಮಧ್ಯಾಹ್ನ 1 ಗಂಟೆಗೆ ಟವರ್ ನಿರ್ಮಾಣದ ಕಾಮಗಾರಿ ಆರಂಭಿಸಲು ಅಧಿಕಾರಿಗಳು ಜಮೀನಿಗೆ ತೆರಳಿದ್ದರು. ಈ ವೇಳೆ ಜಮೀನಿನ ಮಾಲೀಕ ಅಧಿಕಾರಿಗಳೊಂದಿಗೆ ಸಹಕ-ರಿಸುವ ಬದಲಿಗೆ ಅವರ ಸಮ್ಮುಖದಲ್ಲಿ ವಿಷ ಪದಾರ್ಥ ಸೇವನೆಗೆ ಯತ್ನಿಸಿದ್ದರು. ಅವರುಗೆ ಜಿಲ್ಲಾಸ್ಪತ್ರೆಯಲ್ಲಿ ಸೂಕ್ತ ಚಿಕಿತ್ಸೆ ಹಾಗೂ ನಿಗಾ ವಹಿಸಲಾಗಿದೆ ಎಂದು ಜಿಲ್ಲಾಧಿಕಾರಿಗಳಾದ ಡಾ. ಆನಂದ ಕೆ. ಅವರು ತಿಳಿಸಿದ್ದಾರೆ.

## ಉರುಸುಗಳು ಭಾವೈಕ್ಯತೆಯ ಸಂಕೇತ : ರೇಣುಕಾ ಶ್ರೀ

■ ಉದಯರಶ್ಮಿ ದಿನಪತ್ರಿಕೆ




ಇಂಡಿ: ಅಹಿರಸಂಗ ಗ್ರಾಮದಲ್ಲಿ ಆಚರಿಸುತ್ತಿರುವ ಪೀರ ರಾಜೇನೂರ ಶಾ ಶಾಹನೂರಲಿ ಬಾಬಾ ಉರುಸು ಗ್ರಾಮದಲ್ಲಿ ಹಿಂದು ಮುಸ್ಲಿಮ ಬಾಂಧವರು ಸಹೋದರತ್ವ ಭಾವನೆಯಿಂದ ಆಚರಿಸುತ್ತಿದ್ದು ಭಾವೈಕ್ಯತೆ ಸಂಕೇತವಾಗಿದೆ ಎಂದು ಜೈನಾಪುರದ ರೇಣುಕಾ ಶಿವಾಚಾರ್ಯರರು ಹೇಳಿದರು.

ತಾಲೂಕಿನ ಅಹಿರಸಂಗ ಗ್ರಾಮದಲ್ಲಿ ನಡೆದ ಪೀರ ರಾಜೇನೂರ ಶಾ ಶಾಹನೂರಲಿ ಬಾಬಾ ಉರುಸು ಕಾರ್ಯಕ್ರಮದಲ್ಲಿ ಮಾತನಾಡುತ್ತಿದ್ದರು.

ಪೀರ ರಾಜೇನೂರ ಶಾ ಶಾಹನೂರಲಿ ಬಾಬಾರವರು ಪವಾಡ ಪುರುಷರಾಗಿದ್ದರು. ಹೀಗಾಗಿ ಅವರ ಮೇಲೆ ಜನರ ಅಪಾರ ಪ್ರೇಮ ಇತ್ತು. ಜನರು ಅವರನ್ನು ಗೌರವ ಮತ್ತು ಶ್ರದ್ಧೆಯಿಂದ ಕಾಣುತ್ತಿದ್ದರು. ಅವರಿಂದ ಉದ್ಧಾರ ಆದವರು ಅನೇಕರು ಎಂದರು.

ಶ್ರೀ ಮಲ್ಲಿಕಾರ್ಜುನ ಶ್ರೀಗಳು ಅಹಿರಸಂಗ, ವಿಠ್ಠಲಗೌಡ ಯಶವಂತರಾಯಗೌಡ ಪಾಟೀಲರು, ಅಹಿರಸಂಗದ ರೇವಣಸಿದ್ದಯ್ಯ ಶಾಸ್ತ್ರಿಗಳು, ಅಶೋಕ ಬಡಿಗೇರ ದಾದಾ ಶ್ಯಾಮಣ್ಣವರ ಮಾತನಾಡಿದರು.

ಗೋಳಸಾರದ ಅಭಿನವ ಪುಂಡಲಿಂಗ ಶ್ರೀಗಳು ಸಾನಿಧ್ಯ ವಹಿಸಿದ್ದರು.

ರಜಾಕ ಯಡ್ರಾಮಿ,ಶಬಾನಾ ಶೇಖ, ಪ್ರಭುಗೌಡ ಬಿರಾದಾರ, ಮುಜಬಿರ ರಹಮಾನ ಶ್ಯಾಮಣ್ಣನವರ ಮತ್ತಿತರಿದ್ದರು ವೃದಿಕೆಯ ಮೇಲೆ ಇದ್ದರು.

ವಾಸುದೇವ ಕುಲಕರ್ಣಿ, ಲಾಲಸಾಬ ಮುಲ್ಲಾ, ಯಶವಂತ ಕಾಡೆಗೋಳ, ನಿಸಾರ ಶ್ಯಾಮಣ್ಣನವರ, ಶಿವಾನಂದ ಬ್ಯಾಗೇಳಿ, ಅಪ್ಪಾಶಾ ಇಂಗಳಗಿ ರಾಜಕುಮಾರ ವಾಲಿಕಾರ ಮತ್ತಿತರಿದ್ದರು.

## ಮೇ-ಜೂನ್ ತಿಂಗಳ ಪಡಿತರ ಅಕ್ಕಿ ಬಿಡುಗಡೆ: ಪಡೆದುಕೊಳ್ಳಲು ಡಿಸಿ ಮನವಿ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ರಾಷ್ಟ್ರೀಯ ಆಹಾರ ಭದ್ರತೆ ಕಾಯ್ದೆಯಡಿ 2026ನೇ ಮೇ ಹಾಗೂ ಜೂನ್ ತಿಂಗಳಿಗೆ ಸಂಬಂಧಿಸಿದ ಪಡಿತರ ಅಕ್ಕಿಯನ್ನು ಮೇ ತಿಂಗಳಿನಲ್ಲಿಯೇ ವಿತರಿಸಲು ಜಿಲ್ಲೆಯ ಎಲ್ಲ ನ್ಯಾಯಬೆಲೆ ಅಂಗಡಿಗಳಿಗೆ ಹಂಚಿಕೆ ಮಾಡಲಾಗಿದೆ ಎಂದು ಜಿಲ್ಲಾಧಿಕಾರಿಗಳಾದ ಡಾ. ಆನಂದ ಕೆ. ಅವರು ತಿಳಿಸಿದ್ದಾರೆ.


ಅಂತ್ಯೋದಯ ಅನ್ನಯೋಜನೆ ಪ್ರತಿ ಪಡಿತರ ಚೀಟಿಗೆ ಎರಡೂ ತಿಂಗಳ ಪಡಿತರ ಅಕ್ಕಿ ಒಟ್ಟು 70 ಕೆಜಿ ಹಾಗೂ ಆಧ್ಯತಾ (ಬಿಪಿಎಲ್) ಪಡಿತರ ಚೀಟಿಗೆ ಪ್ರತಿ ತಿಂಗಳು ಪ್ರತಿ ಸದಸ್ಯರಿಗೆ 5 ಕೆಜಿಯಂತೆ ಒಟ್ಟು 10 ಕೆಜಿ ಅಕ್ಕಿಯನ್ನು ಕಡ್ಡಾಯವಾಗಿ ಎರಡು ಪ್ರತ್ಯೇಕ ಬಯೋಮೆಟ್ರಿಕ್ ನೀಡುವ ಮೂಲಕ ಪಡಿತರ ಚೀಟಿದಾರರು ಪಡೆಯಬಹುದಾಗಿದೆ ಎಂದು ತಿಳಿಸಿದ್ದಾರೆ.

ರಾಜ್ಯ ಸರ್ಕಾರದ ಅನ್ನಭಾಗ್ಯ ಯೋಜನೆಯ ಮೇ ಹಾಗೂ ಜೂನ್ ತಿಂಗಳ ಅಕ್ಕಿಯನ್ನು 2026ನೇ ಜೂನ್ ತಿಂಗಳಲ್ಲಿ ವಿತರಣೆ ಮಾಡಲಾಗುವುದು. ಯಾವುದೇ ಕಾರಣಕ್ಕೂ ಸರ್ಕಾರವು ನೀಡುತ್ತಿರುವ ಅಕ್ಕಿಯನ್ನು ಕಾಳಸಂತೆಯಲ್ಲಿ ಮಾರಿಕೊಳ್ಳದಿರಲು ಸೂಚಿಸಿದೆ. ಒಂದು ವೇಳೆ ಮಾರಾಟ ಮಾಡುವುದು ಕಂಡುಬಂದರೆ ಅಂತಹ ಬಿಪಿಎಲ್ ಕಾರ್ಡುಗಳನ್ನು ರದ್ದು ಪಡಿಸಲಾಗುವುದು ಎಂದು ಜಿಲ್ಲಾಧಿಕಾರಿಗಳು ಪ್ರಕಟಣೆಯಲ್ಲಿ ಎಚ್ಚರಿಕೆ ನೀಡಿದ್ದಾರೆ.

## ನೀಟ್ ಪರೀಕ್ಷೆ: ಎಕ್ಸಲಂಟ್ ವಿದ್ಯಾರ್ಥಿ ಚನ್ನವೀರೇಶ ಗೆ 700 ಮಾರ್ಕ್ಸ್ ನಿರೀಕ್ಷೆ

### ಎಕ್ಸಲಂಟ್ ಸಮೂಹ ಶಿಕ್ಷಣ ಸಂಸ್ಥೆಗಳ ಸಂಸ್ಥಾಪಕ ಚೇರಮನ್ ಬಸವರಾಜ್ ಕೌಲಗಿ ವಿಶ್ವಾಸ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ತನ್ನ ಪರಿಣಾಮಕಾರಿ ಬೋಧನೆ ಹಾಗೂ ಅತ್ಯುತ್ತಮ ಫಲಿತಾಂಶದ ಮೂಲಕ ಮನೆ ಮಾತಾಗಿರುವ ಸಂಸ್ಥೆ ಇದೀಗ ನೀಟ್ ಪರೀಕ್ಷೆಯಲ್ಲಿ ಅತ್ಯುತ್ತಮ ಅಂಕಗಳನ್ನು ಪಡೆದುಕೊಂಡು ಮತ್ತೊಂದು ಮೈಲಿಗಲ್ಲು ನೆಡಲು ಸಜ್ಜಾಗಿದೆ ಎಂದು ಎಕ್ಸಲಂಟ್ ಸಮೂಹ ಶಿಕ್ಷಣ ಸಂಸ್ಥೆಗಳ ಸಂಸ್ಥಾಪಕ ಚೇರಮನ್ ಬಸವರಾಜ್ ಕೌಲಗಿ ಹೇಳಿದರು.

ಪತ್ರಿಕೆಯೊಂದಿಗೆ ಮಾಹಿತಿ ಹಂಚಿಕೊಂಡ ಅವರು, ಈ ಬಾರಿ ನೀಟ್ ಪರೀಕ್ಷೆಯ ನಂತರದಲ್ಲಿ ವಿದ್ಯಾರ್ಥಿಗಳು ಕೀ ಉತ್ತರವನ್ನು ಪರಿಶೀಲಿಸಿಕೊಂಡಿದ್ದು ನಿರೀಕ್ಷೆಗಳು ಗ-ರಿಗೆದರಿವೆ. ಎಕ್ಸಲಂಟ್ ವಿಜ್ಞಾನ ಪದವಿ ಪೂರ್ವ ಕಾಲೇಜು ಪ್ರಾರಂಭಗೊಂಡ ಮರು ವರ್ಷದಿಂದಲೇ ತನ್ನ ಸಾಧನೆಯ ಪತಾಕೆಯನ್ನು ಸಂಸ್ಥೆಯು ಹಾ-ರಿಸುತ್ತಲೇ ಬಂದಿದೆ. ಶ್ರೀಧರ ದೊಡಮನಿ ಎನ್ನುವ ವಿದ್ಯಾರ್ಥಿಯು ನೀಟ್ ಹಾಗೂ ಕೆ-ಸಿಇಟಿ ನಲ್ಲಿ ರಾಜ್ಯಕ್ಕೆ ಮೊದಲ ರ್ಯಾಂಕ್ ಪಡೆಯುವ ಮೂಲಕ ಸಾಧನೆಯ ಹಾದಿಯಲ್ಲಿ ಮೊದಲ ಹೆಜ್ಜೆ ಗಟ್ಟಿಯಾಗಿ ಊರಿದನು. ತದ ನಂತರದ ಬ್ಯಾಚ್‌ಗಳಲ್ಲಿ ಬಂದಂತ ಅತ್ಯುತ್ತಮ ಫಲಿತಾಂಶವು ಜನತೆಗೆ ಎಕ್ಸಲಂಟ್ ಮೇಲಿದ್ದ ನಂಬಿಕೆಯನ್ನು ಇನ್ನಷ್ಟು ಗಟ್ಟಿಗೊಳಿಸಿತು ಎಂದರು.

ಅದೇ ರೀತಿ ಈ ಬಾರಿಯ ನೀಟ್ ಪರೀಕ್ಷೆಯನ್ನು ಮುಗಿಸಿದ ವಿದ್ಯಾರ್ಥಿಗಳ ಕೀ ಉತ್ತರಗಳಿಗೆ ಅನುಗುಣವಾಗಿ ನೋಡಿದರೆ ಚನ್ನವೀರೇಶ ಕುಂಬಾರ 700, ಸಲ್ಮಾನ ಗೋಡಿಹಾಳ 685, ಸಾಗರ ಬನಹಟ್ಟಿ 682, ಗಂಗಾಧರ ಮುತ್ತಗಿ 680, ಅನುಷ್ಕಾ 662, ಸುಮಿತ ಎ ಪಿ 657, ಬಸವನಗೌಡ ಬೈರವಾಡಗಿ 645, ಪ್ರತೀಕ ಚವ್ಹಾಣ 640, ಸ್ವಾತಿ ಮಲೆದ 600 ಅಂಕಗಳನ್ನು ಪಡೆದುಕೊಳ್ಳುವ ನಿರೀಕ್ಷೆ ಇದ್ದು ಕಳೆದ ಬಾರಿಗಿಂತ ಈ ಬಾರಿ ಫಲಿತಾಂಶ ಇನ್ನು ಹೆಚ್ಚಾಗುವ ನಂಬಿಕೆ ಇದೆ ಎಂದು ಹೇಳಿದರು.

ಈ ಬಾರಿಯೂ ನೀಟ್ ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶದ ನಿರೀಕ್ಷೆಯಲ್ಲಿದ್ದು ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ರ್ಯಾಂಕ್‌ಗಳನ್ನು ನೀಡುವ ಮೂಲಕ ಪಾಲಕರು ನಮ್ಮ ಮೇಲೆ ಇಟ್ಟಿರುವ ನಂಬಿಕೆಯನ್ನು ಗಟ್ಟಿಗೊಳಿಸುತ್ತೇವೆ ಎಂದು ಎಕ್ಸಲಂಟ್ ಸಮೂಹ ಶಿಕ್ಷಣ ಸಂಸ್ಥೆಗಳ ಸಂಸ್ಥಾಪಕ ಚೇರಮನ್ ಬಸವರಾಜ್ ಕೌಲಗಿ ವಿಶ್ವಾಸ ವ್ಯಕ್ತಪಡಿಸಿದರು.

# ಯಾವ ಸುಖ ಕಂಡರು ಪಾಂಚಾಲಿ ಮತ್ತು ಕುಂತಿದೇವಿ?

■ ಉದಯರಶ್ಮಿ ದಿನಪತ್ರಿಕೆ



ಪಾಂಚಾಲಿ ಕುಂತಿಯ ಸೊಸೆ.

ಮಥುರೆಯ ಶೂರಸೇನನ ಮಗಳು 'ಪೃಥಾ', ಕುಂತಿಸಾಮ್ರಾಜ್ಯದ ಕುಂತಿಭೋಜನ ಮಗಳು 'ಕುಂತಿ'ಯಾದಳು..

ಪಾಂಚಾಲ ದೇಶದ ದ್ರುಪದ ಮಹಾರಾಜನ ಮಗಳು ದ್ರೌಪದಿ, ಹಸ್ತಿನಾಪುರದ ಪಾಂಡವರ ಪತ್ನಿ 'ಪಾಂಚಾಲಿ'ಯಾದಳು..

ಯಾವ ಸುಖಕ್ಕೆ.. ಯಾರ ಕೋಪಕ್ಕೆ.. ಯಾವುದರ ಆರಂಭಕ್ಕೆ?

ಹಿಂದಿನ ಜನ್ಮದಲ್ಲಿ ನಳಯಾನಿಯಾಗಿದ್ದ ದ್ರೌಪದಿ ಶಿವನನ್ನು ಕುರಿತು ತಪಸ್ಸು ಮಾಡಿ, ಎಲ್ಲಾ ಉತ್ತಮ ಗುಣಗಳು ಅಥವಾ ಕೌಶಲ್ಯಗಳು ಇರುವವ ತನ್ನ ಪತಿಯಾಗಬೇಕು ಎಂಬ ವರಬೇಡಿದ್ದರ ಫಲವಾಗಿ 'ಎಲ್ಲಾ ಹಣ್ಣುಗಳು ಒಂದೇ ಮರದಲ್ಲಿ ಬಿಡುವುದಿಲ್ಲ' ಎಂಬ ಪ್ರಾಕೃತಿಕ ಸತ್ಯದಂತೆ, ಎಲ್ಲಾ ಉತ್ತಮ ಗುಣಗಳು ಒಬ್ಬನೇ ಪುರುಷನಲ್ಲಿ ಕ್ರೋಡೀಕೃತವಾಗಿರುವುದಿಲ್ಲವಾದ್ದರಿಂದ, ಉತ್ತಮ ಗುಣಗಳ ಮೊತ್ತವಾದ ಪಂಚಪಾಂಡವರು ಕೃಷ್ಣೆಗೆ(ಕೃಷ್ಣನಂತೆ ಕಪ್ಪಗಿದ್ದ ದ್ರೌಪದಿಗೆ ದೇವತೆಗಳು 'ಕೃಷ್ಣೆ' ಎಂದು ಕರೆದರು) ಪತಿಗಳಾದರು.

ದೇವಿ ಶ್ಯಾಮಲಾ (ಧರ್ಮನ ಪತ್ನಿ), ಭಾರತೀದೇವಿ (ವಾಯುವಿನ ಪತ್ನಿ), ಸಚಿ ದೇವಿ (ಇಂದ್ರನ ಪತ್ನಿ), ಉಷಾ ದೇವಿ(ಅಶ್ವಿನ್ ನ ಪತ್ನಿ) ಪಾರ್ವತಿ (ಶಿವನ ಪತ್ನಿ) ಇಷ್ಟೂ ಜನ ಪಂಚಕನ್ಯೆಯರ ಸಮ್ಮಿಲನವಾದ ದೇವಿ ಶಿವನನ್ನು ಕುರಿತು ತಪಸ್ಸು ಮಾಡಿ ಉತ್ತಮ ಪತಿಗಾಗಿ ವರ ಕೇಳಿದಾಗ ಶಿವಾ "ತಥಾಸ್ತು" ಎಂದುಬಿಡುತ್ತಾನೆ. ಅದರ ಫಲವೆ ದ್ರೌಪದಿ ವಿವಾಹ.

ಆದ್ದರಿಂದಲೇ ಪಂಚಪಾಂಡವರಲ್ಲಿ ಒಬ್ಬೊಬ್ಬರು ದ್ರೌಪದಿಯನ್ನು ವರಿಸುವಾಗಲು ಒಂದೊಂದು ದೇವಿ ಜಾಗೃತವಾಗುತ್ತಾಳೆ ಎಂದು ಹೇಳಲಾಗುತ್ತದೆ.

ಅಂದಹಾಗೆ ವರ ನೀಡಿದ ಶಿವ ಸಹ ಬ್ರಹ್ಮನ ಶಾಪದ ಮೇರೆಗೆ ಅಶ್ವತ್ಥಾಮನಾಗಿ ಜನಿಸಿದ್ದು ಗೊತ್ತೇ ಇದೆ. ಅದೂ ಅಲ್ಲದೆ.ಬ್ರಹ್ಮಚಾರಿ ಅಶ್ವತ್ಥಾಮ ಚಿರಾಯು. ಅವ ಇಂದಿಗೂ ಬದುಕಿದ್ದಾನೆ ಎಂದು ಸಹ ನಂಬಲಾಗುತ್ತದೆ.

ಆದರೆ ದ್ವಾಪರಯುಗದಲ್ಲಿ ಐದು ಜನರನ್ನು ವರಿಸಬೇಕಾಗಿ ಬಂದ ದ್ರೌಪದಿ, ಪಾಂಚಾಲಿಯಾಗಿ ತನ್ನ ಪತಿಯರೊಂದಿಗಿನ ಅನುಭವವನ್ನು ಹೇಳಿಕೊಳ್ಳುವ ರೀತಿ ಯಾವುದೇ ಹೆಣ್ಣಿನ ಮನಸ್ಸಿನ ಮೂಲೆಯನ್ನು ತಟ್ಟದಿರದು.

ಯಜ್ಞದಿಂದ ದೃಷ್ಟದ್ಯುಮ್ನನನ್ನು ಪಡೆದು ಸಂತುಷ್ಟನಾದ ದ್ರುಪದ ಮಹಾರಾಜ, ಯಜ್ಞದಿಂದ ಮೇಲೇಳಲು ಹೋದಾಗ, "ನಿನಗೆ ಎರಡು ಮಕ್ಕಳ ವರವಿರುವುದರಿಂದ ನೀನು ಮತ್ತೊಂದು ಮಗುವನ್ನು ಬೇಡಿಕೊಳ್ಳಬೇಕು" ಎಂದು ಋಷಿಮುನಿಗಳು ಆಜ್ಞೆಮಾಡಿದ್ದರಿಂದ ಮೊದಲೇ ಹೆಣ್ಣುಮಕ್ಕಳೆಂದರೆ ಇಷ್ಟವಿಲ್ಲದ ದ್ರುಪದ, ಅದರಿಂದ ಕುಪಿತನಾಗಿ "ಓಹೋ ಹೌದಾ ಮತ್ತೊಂದು ಮಗುವನ್ನು ಬೇಡಲೇಬೇಕಾ ಬೇಡಿದ್ದೆಲ್ಲವನ್ನು ನಿಮ್ಮ ದೇವತೆಗಳು ಕೊಡುವರೋ " ಎಂಬ ಅಹಂಕಾರದಲ್ಲಿ, ನನಗೆ ಲೋಕಸುಂದ–ರಿಯಾದ ಹೆಣ್ಣುಮಗು ಬೇಕು.. ಆಕೆ ಕಷ್ಟಗಳನ್ನು ಎದುರಿಸುತ್ತಲೇ ಬದುಕಬೇಕು..." ಎಂದೆಲ್ಲಾ ಈ ರೀತಿಯ ಅಪಶಕುನದ ಆಸೆಗಳನ್ನು ಹೇಳುತ್ತಾ ಪಡೆದ ಮಗಳೇ, ಯಜ್ಞಕುಂಡದಿಂದ ಎದ್ದುಬಂದ 'ಯಜ್ಞಸೇನಾ".

ದೃಪದನಂತಹ ತಂದೆಯ ಕೋಪದ ಕೂಸಾದ ದ್ರೌಪದಿ.

ತನ್ನ ಸೌಂದರ್ಯದಿಂದಲೇ ಜಗಗೆದ್ದಿದ್ದ ಕಪ್ಪುಸುಂದರಿ ಕೃಷ್ಣೆ.

ಸ್ವಯಂವರದಲ್ಲಿ ಗೆದ್ದುತಂದ ದ್ರೌಪದಿಯನ್ನು ನಿಲ್ಲಿಸಿಕೊಂಡು "ಅಮ್ಮಾ ಒಂದು ಹೆಣ್ಣನ್ನು ಗೆದ್ದುತಂದಿದ್ದೀವಿ" ಎಂದು ಬಾಗಿಲಲ್ಲೇ

ನಿಂತು ಹೇಳಿದ ಪಾರ್ಥನ ಮಾತು ಒಳಗಿನಿಂದಲೇ ಕೇಳಿಸಿಕೊಂಡ ಕುಂತಿಗೆ, ಅದು "ಒಂದು ಹಣ್ಣನ್ನು ಗೆದ್ದುತಂದಿದ್ದೀವಿ" ಎಂದು ಕೇಳಿಸಿ,

"ಹೌದಾ.. ಹಾಗಾದರೆ ಐದೂ ಜನರು ಹಂಚಿಕೊಳ್ಳಿ" ಎಂದು ಹೇಳಿದ್ದರಿದಲೇ. 'ದ್ರೌಪದಿ', 'ಪಾಂಚಾಲಿ'ಯಾಗುವಂತೆ ಆಯಿತು.

ಕೌರವರು ಕೊಟ್ಟ ಯಮುನಾ ನದಿಯ ದಡದಲ್ಲಿದ್ದ 5 ಹಳ್ಳಿಗಳನ್ನು ಒಳಗೊಂಡ 'ಖಾಂಡವಪ್ರಸ್ಥ' ಎಂಬ ಬರಡುಭೂಮಿಯನ್ನು, ಶ್ರೀಕೃಷ್ಣ(ಮಯಾಸುರ)ನು ಅತ್ಯಾಕರ್ಷಕ ನಗರವಾಗಿ ಪರಿವರ್ತಿಸಿ, 'ಇಂದ್ರಪ್ರಸ್ಥ' ಎಂಬ ಭವ್ಯ ರಾಜಧಾನಿಯನ್ನಾಗಿ ಮಾಡಿ, ಅಲ್ಲಿ ರಾಜಸೂಯ ಯಾಗ ಮಾಡುವಂತೆ ಪಾಂಡವರಿಗೆ ಹೇಳುತ್ತಾನೆ.









ಅದೇ ರಾಜಸೂಯಯಾಗಕ್ಕೆಂದು ಇಂದ್ರಪ್ರಸ್ಥಕ್ಕೆ ಮೊದಲಬಾರಿಗೆ ಬಂದ ದುರ್ಯೋಧನ 'ಗೃಹಪ್ರವೇಶ'ಕ್ಕೆ ಬಂದ ಹೊಸಬರಂತೆ ಅರಮನೆಯ ಆಡಂಬರವನ್ನು ಆಸಕ್ತಿಯಿಂದಲೂ ಅಸೂಯೆಯಿಂದಲೂ ನೋಡುತ್ತಿದ್ದ ಸಂದರ್ಭದಲ್ಲಿ, ಬರೀನೆಲವನ್ನು ನೀರಿರುವ ಭಾಗವೆಂದು ತಿಳಿದು ತನ್ನ ಪಂಚೆಯೆತ್ತಿಕೊಂಡು ನಡೆಯುತ್ತಿದ್ದನ್ನು ಗಮನಿಸಿದ ದಾಸಿ 'ಅಲ್ಲಿ ನೀರಿಲ್ಲ ಬರೀ ನೆಲವೆಂದು' ಸುಯೋಧನನಿಗೆ ತಿಳಿಸಿದ ಕಾರಣ, ಮುಂದೆ ನಡೆಯುತ್ತಾ ಹೋದಾಗ ನೀರಿರುವ ನೆಲವನ್ನೂ ಸಹ ನೀರಿಲ್ಲದ ನೆಲ ಎಂದುಕೊಂಡು ನೀರಿನಮೇಲೆ ಕಾಲಿಟ್ಟು ಅದರಲ್ಲಿ ಬಿದ್ದುಬಿಡುತ್ತಾನೆ. ಅವ ಬಿದ್ದಿದ್ದನ್ನು ಮೇಲಿನಿಂದ ನೋಡಿದ ದ್ರೌಪದಿ & ಸಖಿಯರಿಗೆ ಸ್ವಭಾವಿಕವಾಗಿಯೇ ಜೋರಾಗಿ ನಗು ಬಂದುಬಿಡುತ್ತದೆ. ಒಬ್ಬ ಸಖಿಯಂತೂ "ಅಂಧನ ಮಗ ಅಂಧನಾಗಿಬಿಟ್ಟನೆ" ಎಂದುಬಿಡುತ್ತಾಳೆ.

ಕೋಪದಿಂದ ತಲೆಯೆತ್ತಿ ನೋಡಿದ ಸುಯೋಧನನಿಗೆ ಕಾಣಿಸಿದ್ದು ದ್ರೌಪದಿ. ಹಾಗಾಗಿ ಪಾಂಚಾಲಿಯೇ ಆ ಮಾತು ಹೇಳಿದಳು ಎಂದುಕೊಂಡ ದುರ್ಯೋಧನನ ಕೋಪ ಮುಂದಿನ ಅಚಾತುರ್ಯಗಳಿಗೆ ಕಾರಣವಾದಂತಾಯಿತು.

ತಂದೆಯ ಕೋಪದ ಅಸ್ತ್ರವಾಗಿ ಜನಿಸಿದ ಕೃಷ್ಣೆ, ತುಂಬಿದ ಸಭೆಯಲ್ಲಿ ವಸ್ತ್ರಾಪಹರಣ ಮಾಡಿಸಿಕೊಳ್ಳುವಂತಾಯಿತು.

ನಂತರ ನಡೆದ ಕುರುಕ್ಷೇತ್ರ ಯುದ್ಧ ಯಜ್ಞಸೇನಳ ಐವರು ಮಕ್ಕಳನ್ನೂ, ಅಭಿಮನ್ಯುವನ್ನೂ ಬಲಿತೆಗೆದುಕೊಂಡುಬಿಟ್ಟಿತು.

ಪಟ್ಟದರಸಿಯಾಗಿ ಮೆರೆಯಬೇಕಿದ್ದ ದ್ರೌಪದಿ, ಸೈರಂಧ್ರಿ ಯಾಗಿ ಪರಿಣಿತಳ ಸೇವಕಿಯೂ ಆಗಿಬಿಟ್ಟಳು.

ಎಂದಿಗೂ ವಯಸ್ಸಾಗದ ಶಕ್ತಿಯನ್ನು ಹೊಂದಿದವಳು ಎಂಬ ಅರ್ಥವನ್ನು ಹೊಂದಿದ್ದ 'ನಿತ್ಯಾಯುವಾಣಿ' ಎಂಬ ನಮಾಂಕಿತೆ ದ್ರೌಪದಿ. ಕನ್ಯೆಯಾಗೇ ಇರುವಂತೆ ವರವನ್ನು ಪಡೆದವಳು. ಆದರೆ ಅನುಭವಿಸಿದ್ದು ಮಾತ್ರ ನೋವು.

ಕೃಷ್ಣನ ಅಂತ್ಯದ ನಂತರ ಮನನೊಂದ ಪಾಂಡವರು ಸ್ವರ್ಗಕ್ಕೆ ಹೋಗಲು ಹಿಮಾಲಯದತ್ತ ಪ್ರಯಾಣಿಸುವಾಗ ಅವರಿಗೆ ಸುಮೇರು ಪರ್ವತ ಎದುರಾಗುತ್ತದೆ. ಸುಮೇರು ಪರ್ವತವನ್ನು ದಾಟುವಾಗ ದ್ರೌಪದಿ ಪರ್ವತದಿಂದ ಕೆಳಗೆ ಬಿದ್ದು ಮರಣ ಹೊಂದಿಬಿಡುತ್ತಾಳೆ. ಆಗ ಭೀಮನು ಯುಧಿಷ್ಠಿರನ ಬಳಿ ದ್ರೌಪದಿ ಯಾಕೆ ನಮಗಿಂತ ಮೊದಲು ಸತ್ತಳು..? ನಮ್ಮೊಂದಿಗೆ ಸ್ವರ್ಗಕ್ಕೆ ಬರಲು ಯಾಕೆ ಸಾಧ್ಯವಾಗಲಿಲ್ಲ..? ಎಂದು ಪ್ರಶ್ನಿಸಿದಾಗ, ದ್ರೌಪದಿ ಮನಸಿನಲ್ಲಿ ಅರಗಿನ ಮನೆಯಲ್ಲಿ ನಾವೆಲ್ಲರೂ ಸತ್ತುಹೋದೆವು ಎಂದು ತಿಳಿದು ಆ ಸಮಯದಲ್ಲಿ ಕರ್ಣನನ್ನು ಇಷ್ಟಪಟ್ಟಿದ್ದಳು. ನಮ್ಮ ಪ್ರೀತಿಗೆ ಮೋಸ ಮಾಡಿದಳು. ಆದ್ದರಿಂದ ಆಕೆಗೆ ಸ್ವರ್ಗಕ್ಕೆ ಬರಲು ಸಾಧ್ಯವಾಗಲಿಲ್ಲವೆಂದು ಉತ್ತ–ರಿಸುತ್ತಾನೆ. ಅಂದರೆ ದ್ರೌಪದಿ ಮನಸಿಗೆ ಆ ಭಾವನೆ ಬಂದದ್ದೇ ತಪ್ಪು ಎಂದಾಯಿತು. ಆದರೆ ಪಾಂಡವರು ಮಾತ್ರ ಮತ್ತೊಬ್ಬ ಹೆಣ್ಣನ್ನು ವ–ರಿಸಿದ್ದು..

**ಎಂಥ ದುರಂತ.**

ಐವರು ಗಂಡರ ಮುದ್ದಿನ ಹೆಂಡತಿ ಪಾಂಚಾಲಿ ಯಾವ ಸುಖಪಟ್ಟಳು...

"ಅಮ್ಮನಂತೆ ಮಗಳು, ನೂಲಿನಂತೆ ಸೀರೆ" ಇದು ಗಾದೆ.

ಆದರೆ ಇಲ್ಲಿ "ಅತ್ತೆಯಂತೆ ಸೊಸೆ, ಅಪ್ಪನಣತಿಯಂತೆ ಜೀವನ" ಸಾಗಿಹೋಯಿತು.

ಶೂರಸೇನನ ಮಗಳಾಗಿ ಜನಿಸಿ "ಪೃಥಾ" ಎಂಬ ನಾಮಧೇಯದಿಂದ ನಲಿದ ಮಗು, "ಕುಂತಿ" ಎಂಬ ಹೆಸರಿನಲ್ಲಿ ಪೃಥೆ(ಭೂಮಿ)ಯಂತೆಯೇ ನೋವು ತಿನ್ನಬೇಕಾಯಿತು.

"ನಿನಗೆ ಮಕ್ಕಳಾಗದಿದ್ದರೆ, ನನ್ನ ಎರಡನೇ ಮಗುವನ್ನೇ ನಿನಗೆ ದಾನವಾಗಿ ಕೊಡುತ್ತೇನೆ" ಎಂದು ಗೆಳೆಯನಿಗೆ ಮಾತುಕೊಟ್ಟಿದ್ದ ಶೂರಸೇನ ತನ್ನ ಮಾತಿನಂತೆಯೇ ತನ್ನ ಮಗಳನ್ನು ಒಂದು ಮಾತೂ ಕೇಳದೆ. "ಇನ್ನು ಮುಂದೆ ಇವರೇ ನಿನ್ನ ತಂದೆ ಮಗು" ಎಂದು ಭೋಜರಾಜನನ್ನು ತೋರಿಸಿ, ಕಳಿಸಿಕೊಟ್ಟುಬಿಟ್ಟರು.

ನಿರ್ಭಾವುಕಳಾಗಿ ಭೋಜನೊಂದಿಗೆ ಕುಂತಿರಾಜ್ಯಕ್ಕೆ ಹೊರಟ 'ಪೃಥಾ' ಅಲ್ಲಿ 'ಕುಂತಿ'ಯಾಗಿಬಿಟ್ಟಳು.

"ದೇವರಿಗೂ ಒಲಿಯದ 'ದುರ್ವಾಸಮುನಿ', ನಮ್ಮ ರಾಜ್ಯಕ್ಕೆ ಬರುತ್ತಿರುವುದು ನಮ್ಮ ಪುಣ್ಯ. ಅವರಿಗೆ ಏನೂ ಕಡಿಮೆಯಾಗದಂತೆ ನೀನೇ ನೋಡಿಕೊಳ್ಳಬೇಕು ಮಗಳೇ ನೆನಪಿನಲ್ಲಿರಲಿ" ಎಂದು ತಂದೆ ಭೋಜರಾಜ ಹೇಳಿದ್ದನ್ನು ಪಾಲಿಸಲು ಕುಂತಿ, ದುರ್ವಾಸರಿಗೆ ತನ್ನನ್ನು ತಾನೇ ಅರ್ಪಿಸಿಕೊಂಡುಬಿಟ್ಟಳು.

ಲೋಕಾಪವಾದಕ್ಕೆ ಹೆದರಿ, ರಾಜ್ಯಕ್ಕೆ ಅಪಕೀರ್ತಿ ಬರಬಾರದು ಎಂಬ ತಂದೆಯ ಒತ್ತಾಯಕ್ಕೆ ಮಣಿದು, ಆ ಮಗುವನ್ನೂ ನೀರಿಗೆ ಬಿಟ್ಟಳು.

ಹಿಂದಿನ ದಿನವಷ್ಟೇ ಮಾದ್ರಿಯನ್ನು ವರಿಸಿಬಂದಿದ್ದ ಮತ್ತು ಕುಂತಿಯೊಂದಿಗೆ ಇನ್ನಾ ಒಂದು ರಾತ್ರಿಯೂ ಕಳೆದಿರದ ಪಾಂಡುಮಹಾರಾಜ, ತನ್ನೊಡನೆ ಭೇಟೆಗೆ ಬಂದಿದ್ದ ಮಾದ್ರಿಯ ಮಾತುಕೇಳಿ ಶೃತಿಗೊಳ್ಳುತ್ತಿದ್ದ ಜಿಂಕೆಗಳ ಮೇಲೆ ಬಾಣಪ್ರಯೋಗ ಮಾಡಿಬಿಡುತ್ತಾನೆ. ಜಿಂಕೆಯ ರೂಪದಲ್ಲಿದ್ದ ಕಿಂದಮ ಋಷಿಗಳು ಕನಲಿ, "ನೀನು ಯಾರನ್ನೇ ಕೂಡಿದರು ಅಥವಾ ಹೊಂದಲು ಆಸೆಪಟ್ಟರು ಆ ಕ್ಷಣವೆ ನಿನ್ನ ಜೀವಹೋಗಲಿ" ಎಂಬ ಶಾಪ ಕೊಟ್ಟುಬಿಡುತ್ತಾರೆ.

**ಕುರುರಾಜ ಪಾಂಡು ಕುಂತಿಯ ಪತಿ ಪಾಂಡು**

ಅಂತಹ ಶಾಪಕ್ಕೆ ಗುರಿಯಾದದ್ದು ಅವಳ ಮತ್ತೊಂದು ದುರಂತ.

ತನ್ನಿಂದ ಮಕ್ಕಳಾಗದಿದ್ದರಿಂದ ವಂಶವನ್ನು ಮುಂದುವರೆಸುವ ನಿಟ್ಟಿನಲ್ಲಿ, ಪತಿ ಪಾಂಡುಮಹಾರಾಜನೆ, ಯಮಧರ್ಮರಾಯನಿಂದ ಧರ್ಮರಾಯನನ್ನು, ಇಂದ್ರನಿಂದ ಅರ್ಜುನನ್ನು, ವಾಯುವಿನಿಂದ ಭೀಮನನ್ನು ಮತ್ತು ಅಶ್ವಿನಿ ದೇವತೆಗಳಿಂದ ಮಾದ್ರಿ, ನಕುಲ ಸಹದೇವರನ್ನು ಪಡೆಯುವಂತೆ ಮಾಡಲೇಬೇಕಾಯಿತು.

ಅಂದರೆ ಕುಂತಿಯ ಜೀವನದಲ್ಲೂ 5 ಪುರುಷರ ಪ್ರವೇಶ.

ಕುಂತಿಗೆ ಜನ್ಮನೀಡಿದ ತಂದೆಯೇ ಗೆಳೆಯನಿಗೆ ಮಗಳನ್ನು ದಾನವಾಗಿ ಕೊಟ್ಟು, ಆ ತಂದೆಯು ಮಗಳನ್ನು ಮುನಿಯಸೇವೆ ಮಾಡಲು ನೇಮಿಸಿದ.

ಜೀವನಪೂರಾ ಕುಂತಿಯ ಸೌಖ್ಯ ಕಾಯಬೇಕಾದ ಪತಿ ಪಾಂಡುವೆ, ವಂಶೋದ್ಧಾರಕ್ಕಾಗಿ ತನ್ನ ಧರ್ಮಪತ್ನಿ ಕುಂತಿಯನ್ನು ಮತ್ತೊಬ್ಬರ ಹತ್ತಿರ ಕಳಿಸಿಕೊಡಬೇಕಾಯಿತು.

ನಂತರ 15 ವರ್ಷಗಳ ಕಾಲ ಆಕೆಯ ಮಕ್ಕಳು ಕಾಡುಪಾಲಾದರು.


ಕುರುಕ್ಷೇತ್ರದ ಸಮಯದಲ್ಲಿ ಹೆತ್ತ ಮಗ ಕರ್ಣನ ಹತ್ತಿರವೇ ಭಿಕ್ಷೆಬೇಡುವಂತಾಯಿತು.

ಯಾವ ಸುಖ ಕಂಡಳು ಕುಂತಿದೇವಿ..

ಅತ್ತ ಅತ್ತೆ ಕುಂತಿದೇವಿ ಜೀವನಪೂರಾ ನೋವನ್ನು ನುಂಗುತ್ತಾಹೋದಳು







ಇತ್ತ ಸೊಸೆ ಪಾಂಚಾಲಿ ಜೀವನವೆಲ್ಲಾ ನೋವನ್ನೇ ಉಣ್ಣುತ್ತಾಹೋದಳು

ಲೇಖನ
■ **ರಶ್ಮಿ ಕೆ. ವಿಶ್ವನಾಥ್**
**ಮೈಸೂರು**



## ಮೇ 9ರಂದು ಬಿಎಸ್‌ವೈ 50 ವರ್ಷದ ಸಾರ್ಥಕ ಸೇವೆಗೆ ಅಭಿಮಾನೋತ್ಸವ ಗಿರಿಜಿಲ್ಲೆಯಿಂದ 5 ಸಾವಿರ ಕಾರ್ಯಕರ್ತರು

ಯಾದಗಿರಿ: ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ರಾಜಕೀಯ ಜೀವನದ 50 ವರ್ಷದ ಸಾರ್ಥಕ ಸೇವೆಯನ್ನು ಆಚರಿಸುವ ಮಹತ್ವದ ಕಾರ್ಯಕ್ರಮ ಮೇ 9ರಂದು ಚಿತ್ರದುರ್ಗದಲ್ಲಿ ನಡೆಯಲಿದ್ದು, ಯಾದಗಿರಿ ಜಿಲ್ಲೆಯಿಂದ ಭಾರಿ ಸಂಖ್ಯೆಯಲ್ಲಿ ಬಿಜೆಪಿ ಕಾರ್ಯಕರ್ತರು ಪಾಲ್ಗೊಳ್ಳಲಿದ್ದಾರೆ.

ಮಂಗಳವಾರ ಯಾದಗಿರಿಯ ಪತ್ರಿಕಾ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ಬಸವರಾಜಪ್ಪ ವಿಭೂತಿಹಳ್ಳಿ ಮಾತನಾಡಿ, "ಗಿರಿಜಿಲ್ಲೆಯಿಂದ ಸುಮಾರು ಐದು ಸಾವಿರ ಕಾರ್ಯಕರ್ತರು, ಮುಖಂಡರು ಮತ್ತು ಪದಾಧಿಕಾರಿಗಳು ಈ ಕಾರ್ಯಕ್ರಮಕ್ಕೆ ತೆರಳಲಿದ್ದಾರೆ" ಎಂದು ತಿಳಿಸಿದರು.

ಯಡಿಯೂರಪ್ಪ ಅವರ ಕೊಡುಗೆ ಯಾದಗಿರಿ ಜಿಲ್ಲೆಯ ಅಭಿವೃದ್ಧಿಗೆ ಅಪಾರವಾಗಿದೆ. ಜಿಲ್ಲೆ ಘೋಷಣೆಯಾಗಲು ಅವರ ಪಾತ್ರ ಮಹತ್ವದ್ದಾಗಿದೆ. ಈ ಹಿನ್ನೆಲೆ ಚಿತ್ರದುರ್ಗದ ಸಮಾರಂಭದಲ್ಲಿ ಯಾದಗಿರಿ ಜಿಲ್ಲಾ ಬಿಜೆಪಿ ವತಿಯಿಂದ ವಿಶೇಷ ಸನ್ಮಾನ ನೆರವೇರಿಸಲಾಗುತ್ತದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ವೀರಶೈವ ಧರ್ಮದ ಪಂಚಪೀಠಗಳ ಜಗದ್ಗುರುಗಳು, ವಿವಿಧ ಮಠಗಳ ಶ್ರೀಗಳು ಹಾಗೂ ವಿವಿಧ ಸಮುದಾಯಗಳ ಗುರುಗಳು ಭಾಗವಹಿಸಲಿದ್ದಾರೆ. ಕೇಂದ್ರ ಗೃಹ ಸಚಿವ ಅಮಿತ್ ಶಾ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದು, ಮಾಜಿ ಸಚಿವ ಹಾಗೂ ಹಾಲಿ ಸಂಸದ ಗೋವಿಂದ ಕಾರಜೋಳ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ವಿವರಿಸಿದರು.

ಸುದ್ದಿಗೋಷ್ಠಿಯಲ್ಲಿ ರಾಜ್ಯ ಕಾರ್ಯಕಾರಿ ಸದಸ್ಯ ಮಹೇಶರೆಡ್ಡಿ ಮುದ್ನಾಳ, ಮುಖಂಡರಾದ ರಾಚಣ್ಣಗೌಡ ಮುದ್ನಾಳ, ನಾಗರತ್ನ ಕುಪ್ಪಿ, ದೇವೇಂದ್ರನಾಥ ನಾದ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪರಶುರಾಮ ಕುರಕುಂದಿ, ಹೆಡಗಿಮದ್ರಾ ಸೇರಿದಂತೆ ಹಲವು ಮಂದಿ ಉಪಸ್ಥಿತರಿದ್ದರು.

## ಶಾಸಕ ತುನ್ನೂರ: ಶೀಘ್ರವೇ 5 ಕೋಟಿ ಕಾಮಗಾರಿ ಆರಂಭ

ಯಾದಗಿರಿ: ನಗರದ ಯಾದಗಿರಿ–ಸೇಡಂ ರಾಜ್ಯ ಹೆದ್ದಾರಿಗೆ ಸಂಪರ್ಕ ಹೊಂದಿರುವ ಹತ್ತಿಕುಣಿ ಕ್ರಾಸ್ ಪ್ರದೇಶಕ್ಕೆ ಶಾಸಕ ಚನ್ನಾರಡ್ಡಿ ಪಾಟೀಲ್ ತುನ್ನೂರ ಭೇಟಿ ನೀಡಿ, ರಸ್ತೆಯ ವಾಸ್ತವಿಕ ಸ್ಥಿತಿಯನ್ನು ಪರಿಶೀಲಿಸಿದರು. ಈ ವೇಳೆ ಮಾತನಾಡಿದ ಅವರು, ಸುಮಾರು ?5 ಕೋಟಿ ವೆಚ್ಚದಲ್ಲಿ ಹತ್ತಿಕುಣಿ ಕ್ರಾಸ್‌ನಿಂದ ಗಂಗಾನಗರವರೆಗೆ ರಸ್ತೆ ಅಗಲೀಕರಣ, ಹೊಸ ರಸ್ತೆ ನಿರ್ಮಾಣ, ಚರಂಡಿ ವ್ಯವಸ್ಥೆ, ರಸ್ತೆ ವಿಭಜ–ಕ ಹಾಗೂ ಎರಡೂ ಬದಿಗಳಲ್ಲಿ ಸ್ಟ್ರೀಟ್ ಲೈಟ್ ಅಳವಡಿಕೆ ಸೇರಿದಂತೆ ಸಮಗ್ರ ಕಾಮಗಾ–ರಿಗಳನ್ನು ಶೀಘ್ರವೇ ಆರಂಭಿಸಲಾಗುವುದು ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಲೋಕೋಪಯೋಗಿಇಲಾಖೆಹಾಗೂನಗರಸಭೆ ಅಧಿಕಾರಿಗಳೊಂದಿಗೆ ಚರ್ಚಿಸಿದ ಶಾಸಕರು, ಈ ಮಾರ್ಗದಲ್ಲಿ ವಾಹನ ಸಂಚಾರ ಮತ್ತು ಜನ ಸಂಚಾರ ಹೆಚ್ಚಿರುವ ಹಿನ್ನೆಲೆಯಲ್ಲಿ ಯಾವುದೇ ಮುಲಾಜಿ ಮಾಡದೆ ರಸ್ತೆ ವ್ಯಾಪ್ತಿಗೆ ಬರುವ ಅಂಗಡಿ–ಮುಗ್ಗಟ್ಟುಗಳನ್ನು ತೆರವುಗೊಳಿಸಿ, ಸರಿಯಾದ ಯೋಜನೆಯೊಂದಿಗೆ ಕಾಮಗಾರಿ ಕೈಗೊಳ್ಳುವಂತೆ ಸೂಚಿಸಿದರು. ಇಲ್ಲಿನ ಟ್ರಾಫಿಕ್ ಸಮಸ್ಯೆ ಕುರಿತು ಮಾತನಾಡಿದ ಅವರು, ವಾಹನಗಳ ನಿಲುಗಡೆಗೆ ತೊಂದರೆ ಉಂಟಾಗುತ್ತಿರುವುದರಿಂದ ಟ್ರಾಫಿಕ್ ಪೊಲೀಸ್ ಅಧಿಕಾರಿಗಳೊಂದಿಗೆ ಚರ್ಚಿಸಿ ಶಾಶ್ವತ ಪರಿಹಾರ ಕಂಡುಕೊಳ್ಳಲು ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು. ಹತ್ತಿಕುಣಿ ಕ್ರಾಸ್ ಸುತ್ತಮುತ್ತ ಬಡ ಕೂಲಿ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿ ವಾಸಿಸುತ್ತಿದ್ದು, ಪರಿಸರ ಸ್ವಚ್ಛತೆ ಕೊರತೆ ಇದೆ ಎಂದು ಗಮನಿಸಿದ ಶಾಸಕರು, ನಗರಸಭೆ ಅಧಿಕಾರಿಗಳು ನಿಯಮಿತವಾಗಿ ಭೇಟಿ ನೀಡಿ ಸ್ವಚ್ಛತೆಗೆ ಆದ್ಯತೆ ನೀಡಬೇಕು ಎಂದು ಸೂಚಿಸಿದರು. ಹಳ್ಳದ ಸೇತುವೆ ಸಮೀಪದಲ್ಲಿ ತ್ಯಾಜ್ಯವನ್ನು ಅಕ್ರಮವಾಗಿ ಸುರಿಯುತ್ತಿರುವ ಬಗ್ಗೆ ಕಳವಳ ವ್ಯಕ್ತಪಡಿಸಿ, ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಿ, ಅಗತ್ಯವಿದ್ದರೆ ದಂಡ ವಿಧಿಸುವ ಮೂಲಕ ಸಮಸ್ಯೆ ಪರಿಹರಿಸಬೇಕು ಎಂದು ಹೇಳಿದರು. ಕಳೆದ ಹಲವು ವರ್ಷಗಳಿಂದ ಈ ರಸ್ತೆಯಲ್ಲಿ ಯಾವುದೇ ಅಭಿವೃದ್ಧಿ ಕಾಮಗಾರಿ ಕೈಗೊಳ್ಳದ ಕಾರಣ ತಗ್ಗು–ಗುಂಡಿಗಳು ಉಂಟಾಗಿ ವಾಹನ ಸಂಚಾರಕ್ಕೆ ತೊಂದರೆ ಆಗುತ್ತಿದೆ. ಸಾರ್ವಜನಿಕರಿಂದ ಬಂದ ದೂರುಗಳ ಹಿನ್ನೆಲೆಯಲ್ಲಿ ಈ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿದೆ. ಕಾಮಗಾರಿಗಳನ್ನು ಗುಣಮಟ್ಟದಿಂದ ಪೂರ್ಣಗೊಳಿಸಿದರೆ ಜನರಿಗೆ ದೀರ್ಘಕಾಲ ಪ್ರಯೋಜನವಾಗುತ್ತದೆ ಎಂದು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

## ಸರ್ವ ಸಮುದಾಯಗಳ ಅಭಿವೃದ್ಧಿಗೆ ಬದ್ಧ: ಶಾಸಕ ತುನ್ನೂರ್



ಯಾದಗಿರಿ: ಎಲ್ಲ ಸಮುದಾಯಗಳ ಸಮಗ್ರ ಅಭಿವೃದ್ಧಿಗೆ ತಾವು ಬದ್ಧರಾಗಿದ್ದು, ಜನರ ಅಗತ್ಯಗಳಿಗೆ ಸ್ಪಂದಿಸುವುದು ತಮ್ಮ ಮೊದಲ ಆದ್ಯತೆ ಎಂದು ಶಾಸಕ ಚನ್ನಾರೆಡ್ಡಿ ತುನ್ನೂರ್ ಹೇಳಿದರು.

ವಡಗೇರಾ ತಾಲೂಕಿನ ಬಬಲಾದ ಗ್ರಾಮದಲ್ಲಿ ಶಾಸಕರ ಅನುದಾನದಡಿ ಖಬರಸ್ಥಾನದಲ್ಲಿ ಕುಡಿಯುವ ನೀರಿನ ಸಮಸ್ಯೆ ನಿವಾರಣೆಗಾಗಿ ಬೋರವೆಲ್ ವ್ಯವಸ್ಥೆ ಕಲ್ಪಿಸಿದ ಹಿನ್ನೆಲೆ, ಮಂಗಳವಾರ ಮುಸ್ಲಿಂ ಸಮುದಾಯದ ಮುಖಂಡರು ಅವರನ್ನು ಸನ್ಮಾನಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಶಾಸಕರು, ಗ್ರಾಮಗಳಲ್ಲಿ ಅಗತ್ಯವಿರುವ ಮೂಲಭೂತ ಸೌಲಭ್ಯಗಳ ಪಟ್ಟಿ ನೀಡಿದರೆ ಸರ್ಕಾರದ ಮೂಲಕ ಅವುಗಳನ್ನು ಕಲ್ಪಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.

ಗ್ರಾಮದ ಮುಖಂಡ ಜಲಾಲ್ ಪಟೇಲ್ ಮಾತನಾಡಿ, ಖಬರಸ್ಥಾನದಲ್ಲಿ ನೀರಿನ ತೀವ್ರ ಸಮಸ್ಯೆ ಎದುರಾಗುತ್ತಿದ್ದು, ವಿಷಯವನ್ನು ಶಾಸಕರ ಗಮನಕ್ಕೆ ತಂದ ತಕ್ಷಣವೇ ಬೋರವೇಲ್ ವ್ಯವಸ್ಥೆ ಮಾಡಿಸಿರುವುದು ಶ್ಲಾಘನೀಯ ಕಾರ್ಯವಾಗಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಬಬಲಾದ ಗ್ರಾಮದ ಮುಸ್ಲಿಂ ಮುಖಂಡರಾದ ಮೈಬೂಬ್ ಪಟೇಲ್, ಚಾಂದ ಪಟೇಲ್, ಇಸ್ಮಾಯಿಲ್ ಪಟೇಲ್, ಸೈಯದ್ ಪಟೇಲ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

# ಸಂತೆಯ ಜನರಿಗೆ ಉಚಿತ ಕುಡಿಯುವ ನೀರಿನ ಸೌಲಭ್ಯ




■ ಉದಯರಶ್ಮಿ ದಿನಪತ್ರಿಕೆ

ಇಂಡಿ: ಪಟ್ಟಣದ ಮಹಾವೀರ ವೃತ್ತದಲ್ಲಿ ಆಯಿಷಾ ಮಜಿದದ ಇಮಾಮ ಅಹಮ್ಮದ ಸಲಾವೂದ್ದೀನ ನಾಗೂರ ಇವರ ನೇತೃತ್ವದಲ್ಲಿ ನಗರದ ಮಹಾವೀರ ವೃತ್ತದಲ್ಲಿ ಮಂಗಳವಾರ ಸಂತೆಯ ನಿಮಿತ್ಯ ಉಚಿತ ಬಿಸ್ಲೇರಿ ತಂಪಾದ ಕುಡಿಯುವ ನೀರು ವಿತರಿಸಿದರು.

ಗ್ರಾಮೀಣ ಮತ್ತು ನಗರದ ಜನತೆಗೆ ಸಂತೆಯ ದಿನ ಪ್ರತಿ ಮಂಗಳವಾರ ಬಾಯಾರಿಕೆ ನಿವಾ-ರಿಸಿಕೊಳ್ಳಲು ಈ ಸೌಲಭ್ಯ ಮಾಡಲಾಗಿದೆ.

ಈಗಾಗಲೇ ನಿನ್ನೆಯ ಮಂಗಳವಾರ ಪ್ರಾರಂಭವಾಗಿದ್ದು ಮೇ ತಿಂಗಳವರೆಗೂ ಇರುವದು.

15 ತರುಣರು ನೀರು ಕೊಡಲು ಸಹಕ-ರಿಸುವರು. ಮತ್ತು ಪ್ರತಿ ಮಂಗಳವಾರ ಒಂದು ನೂರು ಕ್ಯಾನ ನೀರು ಸಾರ್ವಜನಿಕರಿಗೆ ಉಚಿತವಾಗಿ ವಿತರಿಸಲಾಗುತ್ತಿದೆ. ಹಸನ್ ಮುಜಾವರ, ವಸೀಮ ವಾಲಿಕಾರ,ಉಮರ ಫಾರುಕ ಬಾಗವಾನ, ಮೀರ್ ಅಯಾನ ಸುಲ್ತಾನ, ವಕಾಸ ಪಟೇಲ, ಫೈಝಾನ ಮುಲ್ಲಾ, ಅಜರ ಇಂಡಿಕರ, ಅಬ್ಬು ಕೋಟ್ನಾಳ, ಮಾಝು ನಾಯಿಕೊಡಿ, ಅಜಾಜ ಮುನಸಿ ವಿತರಣೆಯಲ್ಲಿದ್ದರು.

# ರಾಜಗೀರಾ ಗ್ರಾಮದಲ್ಲಿ ಸಿಸಿ ರಸ್ತೆ ಕಾಮಗಾರಿಗೆ ಚಾಲನೆ

ಬೀದರ್: ರಸ್ತೆ ಎನ್ನುವುದು ಕೇವಲ ಸಂಚಾರದ ಮಾರ್ಗವಲ್ಲ, ಅದು ಒಂದು ಪ್ರದೇಶದ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಯ ಮೂಲ ಕೊಂಡಿಯಾಗಿದೆ ಎಂದು ಬೀದರ್ ದಕ್ಷಿಣ ಕ್ಷೇತ್ರದ ಶಾಸಕರಾದ ಡಾ. ಶೈಲೇಂದ್ರ ಬೆಲ್ದಾಳೆ ಅವರು ಹೇಳಿದರು.

ಬೀದರ್ ದಕ್ಷಿಣ ಕ್ಷೇತ್ರದ ರಾಜಗೀರಾ ಗ್ರಾಮದಲ್ಲಿ ಸುಮಾರು ?75 ಲಕ್ಷ ವೆಚ್ಚದ ಸಿಸಿ ರಸ್ತೆ ನಿರ್ಮಾಣ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದ ಅವರು.

ಗ್ರಾಮೀಣ ಅಭಿವೃದ್ಧಿಗೆ ಮೂಲಭೂತ ಸೌಕರ್ಯಗಳಾದ ರಸ್ತೆ ವ್ಯವಸ್ಥೆ ಅತ್ಯಂತ ಪ್ರಮುಖವಾಗಿದ್ದು, ಈ ಕಾಮಗಾರಿಯಿಂದ ಸ್ಥಳೀಯರಿಗೆ ಸಂಚಾರ ಸುಲಭವಾಗಲಿದೆ ಎಂದು ತಿಳಿಸಿದರು.

ಅಭಿವೃದ್ಧಿಯ ಪಥದಲ್ಲಿ ಮುಂದುವರಿಯುತ್ತಿರುವ ಬೀದರ್ ದಕ್ಷಿಣ ಕ್ಷೇತ್ರದಲ್ಲಿ ರಸ್ತೆ ಮೂಲಸೌಕರ್ಯಕ್ಕೆ ಮತ್ತೊಂದು ಮಹತ್ವದ ಹೆಜ್ಜೆ ಇಡಲಾಗಿದೆ.



ವಿವಿಧ ಗ್ರಾಮಗಳಲ್ಲಿ ಲಕ್ಷಾಂತರ ರೂಪಾಯಿ ವೆಚ್ಚದ ರಸ್ತೆ ನಿರ್ಮಾಣ ಕಾಮಗಾರಿಗಳಿಗೆ ಹಂತಹಂತವಾಗಿ ಚಾಲನೆ ನೀಡಲಾಗುತ್ತಿದೆ ಎಂದರು.ರಸ್ತೆ ಎನ್ನುವುದು ಕೇವಲ ಸಂಚಾರದ ಮಾರ್ಗವಲ್ಲ, ಅದು ಒಂದು ಪ್ರದೇಶದ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಯ ಮೂಲ ಕೊಂಡಿಯಾಗಿದೆ. ಉತ್ತಮ ರಸ್ತೆ ವ್ಯವಸ್ಥೆಯಿಂದ ಜನರ ಜೀವನಮಟ್ಟ ಏರಿಕೆಯಾಗುತ್ತದೆ ಎಂದು ಹೇಳಿದರು.

ಕಾಮಗಾರಿ ನಿಗದಿತ ಅವಧಿಯಲ್ಲಿ ಹಾಗೂ ಉತ್ತಮ ಗುಣಮಟ್ಟದಲ್ಲಿ ಪೂರ್ಣಗೊಳ್ಳಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿ , ಜನರ ನಿರೀಕ್ಷೆಗೆ ತಕ್ಕಂತೆ ಅಭಿವೃದ್ಧಿ ಕಾರ್ಯಗಳನ್ನು ಮುಂದುವರಿಸಲಾಗುವುದು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಪ್ರಮುಖರಾದ ಸುರೇಶ ಮಾಶೆಟ್ಟಿ, ವಿಜಯಕುಮಾರ ಪಾಟೀಲ ಗಾದಗಿ, ಸೂರ್ಯಕಾಂತ ಪಾಟೀಲ, ಹಣಮಂತರಾವ ಪಾಟೀಲ, ಡಾ.ವಿರೇಂದ್ರ ಪಾಟೀಲ, ಶಾಮರಾವ ಕುಲಕರ್ಣಿ, ಶಿವರಾಜ ಸ್ವಾಮಿ,ಗುರುನಾಥ ರಾಜಗೀರಾ, ಮಲ್ಲಿಕಾರ್ಜುನ ಪಾಟೀಲ,ಪರಮೇಶ ಪಾಟೀಲ, ಶಿವು ಪಾಟೀಲ,

ಶೇಖರ ಕೋಳಾರ, ಸುಧಾಕಾರ ವರ್ಮಾ, ಅರವಿಂದ ಪಾಟೀಲ ಚಿಲ್ಲರ್ಗಿ, ಶಾಂತವೀರ ಪಾಟೀಲ, ಓಂಕಾರ ಪಾಟೀಲ, ಆಕಾಶ ಅಡ್ಡೆ, ಶಾಂತು ಕಮಲಾಪುರೆ, ಇರಪ್ಪಾ ಅಡ್ಡೆ, ಬಸವರಾಜ ಶೇರಿಕಾರ, ಸಂತೋಷ ಶೇರಿಕಾರ, ಯಲ್ಲಪ್ಪಾ ಬಸಂತಪುರ, ನಾಗರಾಜ ಖೌದೆ ಮತ್ತಿತರರು ಉಪಸ್ಥಿತರಿದ್ದರು.

# ಕಬ್ಬಿನ ಬಿಲ್ಲು ಪಾವತಿಸದಿದ್ದರೆ ಜಿಲ್ಲಾಧಿಕಾರಿ ಕಚೇರಿಗೆ ಬೀಗ: ರೈತ ಸಂಘದ ಎಚ್ಚರಿಕೆ

ಬೀದರ :ಜಿಲ್ಲೆಯ ರೈತರ ಕಬ್ಬಿನ ಸಂಪೂರ್ಣ ಬಿಲ್ಲು ಒಂದು ವಾರದೊಳಗಾಗಿ ಪಾವತಿಸದಿದ್ದಲ್ಲಿ ಜಿಲ್ಲಾಧಿಕಾರಿ ಕಚೇರಿಗೆ ಬೀಗ ಜಡಿದು ಉಗ್ರ ಪ್ರತಿಭಟನೆ ನಡೆಸುವುದಾಗಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಜಿಲ್ಲಾ ಘಟಕ ಎಚ್ಚರಿಕೆ ನೀಡಿದೆ.

ಈ ಕುರಿತು ಜಿಲ್ಲಾಧಿಕಾರಿಗಳಿಗೆ ಸಲ್ಲಿಸಿದ ಮನವಿಯಲ್ಲಿ, ಏಪ್ರಿಲ್ ತಿಂಗಳ ಅಂತ್ಯದೊಳಗಾಗಿ (30-04-2026) ಎಲ್ಲಾ ಸಕ್ಕರೆ ಕಾರ್ಖಾನೆಗಳು ರೈತರ ಕಬ್ಬಿನ ಬಿಲ್ಲು ಪಾವತಿಸುವುದಾಗಿ ಜಿಲ್ಲಾಡಳಿತ ಭರವಸೆ ನೀಡಿದ್ದರೂ, ಗಡುವು ಕಳೆದ ಒಂದು ವಾರವಾದರೂ ಪಾವತಿ ಆಗಿಲ್ಲ ಎಂದು ಆರೋಪಿಸಲಾಗಿದೆ.

ಇದರಿಂದ ರೈತರು ಸಂಕಷ್ಟಕ್ಕೆ ಸಿಲುಕಿದ್ದು, ಇನ್ನೂ ಒಂದು ವಾರ ಗಡುವು ನೀಡಲಾಗುತ್ತಿದೆ. ಆ ಅವಧಿಯಲ್ಲಿ ಎಲ್ಲಾ ರೈತರ ಖಾತೆಗೆ ಬಾಕಿ ಹಣ ಜಮೆ ಮಾಡಿಸದಿದ್ದಲ್ಲಿ ಜಿಲ್ಲಾಧಿಕಾರಿ ಕಚೇರಿಗೆ ಬೀಗ ಜಡಿದು




ಹೋರಾಟ ಕೈಗೊಳ್ಳುವುದಾಗಿ ತಿಳಿಸಲಾಗಿದೆ.

ಈ ಸಂದರ್ಭದಲ್ಲಿಸಿದ್ರಾಮಪ್ಪಾ ಆಣದೂರೆ (ಜಿಲ್ಲಾಧ್ಯಕ್ಷರು), ಚಂದ್ರಶೇಖರ ಜಮಖಂಡಿ (ರಾಜ್ಯ ಉಪಾಧ್ಯಕ್ಷರು), ಶ್ರೀಮಂತ ಬಿರಾದಾರ (ಜಿಲ್ಲಾ ಕಾರ್ಯಾಧ್ಯಕ್ಷರು), ದಯಾನಂದ ಸ್ವಾಮಿ ಸಿರ್ಸಿ (ಜಿಲ್ಲಾ ಪ್ರಧಾನ ಕಾರ್ಯದರ್ಶಿ), ಶೇಷರಾವ ಕಣಜಿ (ರಾಜ್ಯ ಪ್ರತಿನಿಧಿಗಳು), ಶೋಭಾವತಿ ಕಾರಭಾರಿ (ಮಹಿಳಾ ಘಟಕ ಜಿಲ್ಲಾಧ್ಯಕ್ಷರು), ಭಾಗ್ಯಶ್ರೀ ದೇಶಮುಖ (ಔರಾದ ತಾಲೂಕು ಮಹಿಳಾ ಅಧ್ಯಕ್ಷರು), ಮಹಾನಂದಾ ದೇಶಮುಖ (ಭಾಲ್ಕಿ ತಾಲೂಕು ಮಹಿಳಾ ಅಧ್ಯಕ್ಷರು), ಮಲ್ಲಿಕಾರ್ಜುನ ಬಿರಾದಾರ (ಭಾಲ್ಕಿ ತಾಲೂಕು ಕಾರ್ಯದರ್ಶಿ), ಸುಮಂತ ಗ್ರಾಮಲೆ (ರೈತ ಮುಖಂಡರು), ಸತೀಶ ನನ್ನೂರೆ ಮುಖಂಡರಾದ ಶಿವಾನಂದ ಹುಡಗಿ, ಮಲ್ಲಿಕಾರ್ಜುನ ಚಕಿ, ಝುರಣಪ್ಪಾ ದೇಶಮುಖ, ರಾಜಕುಮಾರ ಪಾಟೀಲ,ಬಸಪ್ಪಾ ಆಲೂರೆ, ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ಜಿಲ್ಲಾ ಮಟ್ಟದ ಮಕ್ಕಳ ಬೇಸಿಗೆ ಶಿಬಿರ ಸಮಾರೋಪ ಸಮಾರಂಭ ಯಶಸ್ವಿ

ಬೀದರ: ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಬಾಲ ಭವನ ಸಮಿತಿ ಬೀದರ ಹಾಗೂ ರಾಜ್ಯ ಬಾಲ ಭವನ ಸೊಸೈಟಿ ಬೆಂಗಳೂರು ಇವರ ಸಂಯುಕ್ತ ಆಶ್ರಯದಲ್ಲಿ 2026-27ನೇ ಸಾಲಿನ ಜಿಲ್ಲಾ ಮಟ್ಟದ ಮಕ್ಕಳ ಬೇಸಿಗೆ ಶಿಬಿರದ ಸಮಾರೋಪ ಸಮಾರಂಭ ಇಂದು ಹೌಸಿಂಗ್ ಬೋರ್ಡ್ ಕಾಲೋನಿಯ ಜಿಲ್ಲಾ ಬಾಲ ಭವನದಲ್ಲಿ ನಡೆಯಿತು.

ಕಾರ್ಯಕ್ರಮಕ್ಕೆ ರಾಜ್ಯ ಬಾಲ ಭವನ ಸೊಸೈಟಿ ಉಪಾಧ್ಯಕ್ಷರಾದ ಅನಿಲಕುಮಾರ ಜಮಾದರ್ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕರಾದ ಎಂ.ಎಸ್. ಶ್ರೀಧರ ಅವರು ಮಕ್ಕಳೊಂದಿಗೆ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅನಿಲಕುಮಾರ ಜಮಾದರ್ ಅವರು, ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಪ್ರತಿವರ್ಷ ಬೇಸಿಗೆ ಶಿಬಿರಗಳನ್ನು ಆಯೋಜಿಸಲಾಗುತ್ತಿದ್ದು, ಗ್ರಾಮೀಣ ಭಾಗದ ಮಕ್ಕಳಿಗೆ ವಿಶೇಷವಾಗಿ ಉಪಯುಕ್ತವಾಗುತ್ತಿದೆ ಎಂದು ಹೇಳಿದರು. ಮಕ್ಕಳಲ್ಲಿನ ಪ್ರತಿಭೆ ಗುರುತಿಸಿ ಬೆಳೆಸುವ ಉದ್ದೇಶದಿಂದ ಈ ಶಿಬಿರಗಳನ್ನು ಹಮ್ಮಿಕೊಳ್ಳಲಾಗುತ್ತಿದೆ ಎಂದರು.

ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿ ಎಸ್.ಎ. ಮುನಾಫ್ ಅವರು, ಮಕ್ಕಳ ದೈಹಿಕ ಮತ್ತು ಮಾನಸಿಕ ಬೆಳವಣಿಗೆಗೆ ಇಂತಹ ಶಿಬಿರಗಳು ಮಹತ್ವದ್ದಾಗಿದ್ದು, ಪಠ್ಯೇತರ ಚಟುವಟಿಕೆಗಳ ಮೂಲಕ ಮಕ್ಕಳಲ್ಲಿ ಆತ್ಮವಿಶ್ವಾಸ



ಬೆಳೆಸಲಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ಅಧ್ಯಕ್ಷತೆ ವಹಿಸಿದ್ದ ಎಂ.ಎಸ್. ಶ್ರೀಧರ ಅವರು, 15 ದಿನಗಳ ಕಾಲ ನಡೆದ ಶಿಬಿರದಲ್ಲಿ ಚಿತ್ರಕಲೆ, ಕರಕುಶಲೆ, ಜೇಡಿಮಣ್ಣಿನ ಕಲೆ, ಕರಾಟೆ, ಯೋಗ-ಧ್ಯಾನ, ಸಮೂಹ ನೃತ್ಯ ಹಾಗೂ ನಾಟಕ ತರಬೇತಿಗಳನ್ನು ಬೆಳಿಗ್ಗೆ 8ರಿಂದ ಮಧ್ಯಾಹ್ನ 2ರವರೆಗೆ ನೀಡಲಾಗಿದೆ ಎಂದು ತಿಳಿಸಿದರು.

ಶಿಬಿರದಲ್ಲಿ ಸುಮಾರು 120 ಮಕ್ಕಳು ಪಾಲ್ಗೊಂಡಿದ್ದು, ಪೋಷಕರು ಹಾಗೂ ಸಾರ್ವಜನಿಕರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಸಂಪನ್ಮೂಲ ವ್ಯಕ್ತಿಗಳಾಗಿ ಮಹೇಶ್ ಧೂಪೆ, ಸುಧೇಶ್ ಕುಮಾರ್ ಮೋರೆ, ನೇಹಾ ಕಾಂಬಳೆ, ದೇವಿಂದರ್ ಮಾಳಗೆ ಮತ್ತು ರಾಜಕುಮಾರ್ ಅರುಣಾ ಸಾಗರ ಅವರು ತರಬೇತಿ ನೀಡಿದರು.

ಕಾರ್ಯಕ್ರಮವನ್ನು ಸಂಯೋಜಕರಾದ ಸೂರ್ಯಕಾಂತ ಮೊರೆ ಅವರು ನಿರೂಪಿಸಿದರು. ಸುವಿತ್ ಎಸ್. ಮೊರೆ ಅವರು ವಂದನಾರ್ಪಣೆ ಮಾಡಿದರು.

# ವಿವಿಧ ಬೇಡಿಕೆ ಈಡೇರಿಸುವಂತೆ ಪಿಡಿಓ ಸಂಘದಿಂದ ಒತ್ತಾಯ: ಶರತಕುಮಾರ ಅಭಿಮಾನ್

ಬೀದರ:ಇತ್ತಿಚಿಗೆ ಗದಗ ಜಿಲ್ಲೆಯ ರೋಣ ತಾಲೂಕಿನ ಕೊತಬಾಲ ಗ್ರಾಮ ಪಂಚಾಯತ್ ಪಿಡಿಓ ಮುಕ್ತಂ ಹುಸೇನ್ ಕರಡಿಗುಡ್ಡ ಅವರ ಆತ್ಮಹತ್ಯೆ ಪ್ರಕರಣ ಕುರಿತು ಸಮಗ್ರ ತನಿಖೆಯಾಗಿ ಅವರಿಗೆ ನ್ಯಾಯ ಒದಗಿಸಿಕೊಡಬೇಕೆಂದು ಆಗ್ರಹಿಸಿ ಇಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಿಗೆ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘದಿಂದ ಜಿ.ಪಂ. ಸಿಇಓ ಮುಖಾಂತರ ಮನವಿ ಪತ್ರ ಸಲ್ಲಿಸಲಾಗಿದೆ ಎಂದು ಶರತಕುಮಾರ ಅಭಿಮಾನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಈ ಕುರಿತು ಪ್ರಕಟಣೆ ಹೊರಡಿಸಿರುವ ಅವರು ಈ ಪ್ರಕರಣ ಕೇವಲ ಒಬ್ಬ ಅಧಿಕಾರಿಯ ದುರಂತವಲ್ಲ ಬದಲಾಗಿ ಇಡೀ ರಾಜ್ಯದಲ್ಲಿ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಎದುರಿಸುತ್ತಿರುವ ನೈಜ ಮತ್ತು ಭೀಕರ ಪರಿಸ್ಥಿತಿಗೆ ಹಿಡಿದ ಕನ್ನಡಿಯಾಗಿದೆ.ಗ್ರಾಮೀಣಾಭಿವೃದ್ಧಿಯ ಆಧಾರ ಸ್ತಂಭವಾಗಿರುವ ಪಿಡಿಓಗಳು ಇಂದು ತೀವ್ರವಾದ ಕೆಲಸದ ಒತ್ತಡದಲ್ಲಿ ನಲುಗಿ ಹೋಗುತ್ತಿದ್ದಾರೆ. ಅಕಾಲಿಕ ಸಾವುಗಳ ಕುರಿತು ಅಧ್ಯಯನ ಮಾಡಲು ಕಳೆದ ಒಂದು ವರ್ಷದ ಹಿಂದೆ ಮಾನ್ಯ ಮಿನಾಕ್ಷಿ ಸುಂದರಂ ಅವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಲಾಗಿತು.

# ರಾಷ್ಟ್ರದ ಸ್ವಾಸ್ಥ್ಯ ಕಾಪಾಡುವಲ್ಲಿ ರೆಡ್ ಕ್ರಾಸ್ ಪಾತ್ರ ಅನನ್ಯ

■ ಉದಯರಶ್ಮಿ ದಿನಪತ್ರಿಕೆ

**ಇಂದು (ಮೇ 8, ಶುಕ್ರವಾರ) "ಅಂತರಾಷ್ಟ್ರೀಯ ರೆಡ್ ಕ್ರಾಸ್ ದಿನ" ದ ಪ್ರಯುಕ್ತ ಈ ವಿಶೇಷ ಲೇಖನ**

ಶ್ರೇಷ್ಠ ಹೋರಾಟಗಾರ ಮಾರ್ಟಿನ್ ಲೂಥರ್ ಕಿಂಗ್ ಅವರು, "ಖಜಿಜ' ಟಠಣ ಠಿಜಝಣಜಟಿಣ and urgent question is, "What are you doing for others?" ಅದನ್ನೇ ಪುರಂದರ ದಾಸರು "ಮಾನವ ಜನ್ಮ ದೊಡ್ಡದು ಅದನ್ನು ಹಾನಿ ಮಾಡಿಕೊಳ್ಳಬೇಡ, ಬದುಕಿರುವಷ್ಟು ಕಾಲದಲ್ಲಿ ಸದಾ ಸಹಾಯ ಹಸ್ತ ಬಂದವರಿಗೆ ನಿಸ್ವಾರ್ಥದಿಂದ ಮಾನವೀಯತೆ ಮೆರೆದು ಸೇವೆ ಮಾಡು ಅಂದಾಗ ನಿಮ್ಮ ಜನ್ಮ ಸಾರ್ಥಕವಾಗುತ್ತದೆ ಎಂದು ಹೇಳಿರುವುದು ನಿಜಕ್ಕೂ ಸತ್ಯವಾದ ಮಾತು. ಪ್ರವಾಹ, ಅಘಘಾತ ಮತ್ತು ಇನ್ನಿತರ ನೈಸರ್ಗಿಕ ವಿಕೋಪದಂತಹ ಸಂದರ್ಭದಲ್ಲಿ ಜೀವನ್ಮರಣದ ಮಧ್ಯೆ ಹೋರಾಟ ಮಾಡುತ್ತಿರುವ ಜೀವಿಗಳನ್ನು, ರಕ್ಷಿಸಲು ಮತ್ತು ಅಗತ್ಯವಾದಲ್ಲಿ ರಕ್ತದಾನ ಮಾಡುವದರ ಮೂಲಕ ಅವರನ್ನು ಪ್ರಾಣಾಪಾಯದಿಂದ ಸಂರಕ್ಷಿಸುವುದು ರೆಡ್ ಕ್ರಾಸ್ ಘಟಕದ ಸ್ವಯಂ ಸೇವಕರ ಆದ್ಯ ಕರ್ತವ್ಯವಾಗಿದೆ. ಎಲ್ಲ ದಾನಗಳಲ್ಲಿ ಅತಿ ಶ್ರೇಷ್ಠವಾದ ರಕ್ತದಾನ ಮಾಡುವ ಮೂಲಕ ಜೀವಿಗಳ ಪ್ರಾಣವನ್ನು ಉಳಿಸಬೇಕು.

*ಆಚರಣೆಯ ಧ್ಯೇಯೋದ್ದೇಶ: ಪ್ರತಿವರ್ಷ ಮೇ 8 ರಂದು ಜಾಗತಿಕವಾಗಿ ರೆಡ್ ಕ್ರಾಸ್ ದಿನವನ್ನು ಆಚರಿಸಲಾಗುತ್ತದೆ. ಈ ದಿನವು ಯುದ್ಧ, ವಿಪತ್ತು ಮತ್ತು ತುರ್ತು ಸಂದರ್ಭಗಳಲ್ಲಿ ವೈದ್ಯಕೀಯ ನೆರವು ಮತ್ತು ಮಾನವೀಯ ಸೇವೆಗಳನ್ನು ಸಲ್ಲಿಸುವ ಸ್ವಯಂ ಸೇವಕರನ್ನು ಗೌರವಿಸಲು ಮತ್ತು ಆರೋಗ್ಯ, ರಕ್ತದಾನ, ವಿಪತ್ತು ನಿರ್ವಹಣೆ ಮತ್ತು ಯುದ್ಧ ಸಂದರ್ಭದಲ್ಲಿ ಜನರಿಗೆ ಅವಶ್ಯಕ ಮಾನವೀಯ ಸೇವೆ ನೀಡುವ ಬಗ್ಗೆ ಜಾಗೃತಿ ಮೂಡಿಸುವುದೇ ಈ ದಿನದ ಆಚರಣೆಯ ಪ್ರಮುಖ ಧ್ಯೇಯೋದ್ಧೇಶವಾಗಿದೆ.







### ಹಿನ್ನೆಲೆ

1859 ರಲ್ಲಿ ಹೆನ್ರಿ ಡ್ಯೂನಾಂಟ್ ಅವರು ಸೋಲ್ಪರಿನೋ ಎಂಬಲ್ಲಿ ನಡೆದ ಯುದ್ಧದ ಭೀಕರತೆಯನ್ನು ಕಣ್ಣಾರೆ ಕಂಡು, ಗಾಯಗೊಂಡ ಯೋಧರಿಗೆ ಮತ್ತು ಸೈನಿಕರಿಗೆ ಸೇವೆ ಸಲ್ಲಿಸಲು ಈ ರೆಡ್ ಕ್ರಾಸ್ ಸಂಸ್ಥೆಯನ್ನು ಸ್ಥಾಪಿಸಿದರು. ಇದೇ 1984 ರಲ್ಲಿ ಮೊದಲ ವಿಶ್ವ ರೆಡ್ ಕ್ರಾಸ್ ದಿನವಾಗಿ ಆಚ-ರಿಸಲ್ಪಟ್ಟಿತು. ರೆಡ್ ಕ್ರಾಸ್ ಸಂಸ್ಥೆಯಡಿಯಲ್ಲಿ ರಕ್ತದಾನ, ಪ್ರಥಮ ಚಿಕಿತ್ಸೆ, ತುರ್ತು ನೆರವು ಮತ್ತು ಮಾನವೀಯ ಆರೋಗ್ಯಕರ ಸೇವೆಗಳನ್ನು ನೀಡುತ್ತಿರುವ ಡ್ಯೂನಾಂಟ್ ಅವರಿಗೆ 1901 ರಲ್ಲಿ ನೊಬೆಲ್ ಪ್ರಶಸ್ತಿ ದೊರಕಿತು. ಆದ್ದರಿಂದ ಹೆನ್ರಿ ಡ್ಯೂನಾಂಟ್ ಅವರ ಜನ್ಮದಿನವಾದ ಮೇ 8 ರಂದು ವಿಶ್ವದೆಲ್ಲೆಡೆ ರೆಡ್ ಕ್ರಾಸ್ ದಿನವನ್ನಾಗಿ ಆಚರಿಸ್ರಕಾಗುತ್ತಿದೆ.

### ರೆಡ್ ಕ್ರಾಸ್ ದಿನದ ಮಹತ್ವ

ರಾಷ್ಟ್ರದ ಆರೋಗ್ಯ, ಸ್ವಾಸ್ಥ್ಯ ವನ್ನು ಕಾಪಾಡುವಲ್ಲಿ ರೆಡ್ ಕ್ರಾಸ್‌ನ ಪಾತ್ರ ಅನನ್ಯವಾಗಿದೆ. ಅದರಲ್ಲಿ ವಿಶೇಷವಾಗಿ ರಕ್ತದಾನ ಮಾಡಿ ಬದುಕಿಗೊಂದು ಸಾರ್ಥಕತೆ ಹೊಂದುತ್ತಾಮಾನವೀಯತೆಯನ್ನು ಮೆರೆಯಬೇಕು. ಸಮಾಜಕ್ಕಾಗಿ ಏನನ್ನಾದರೂ ಕೊಡುಗೆ ನೀಡಿ ಋಣ ತೀರಿಸಬೇಕೆಂದು ಸಲಹೆ ನೀಡಿದರು. ನೈಸರ್ಗಿಕ ವಿಕೋಪಗಳಂತಹ ಸಂದರ್ಭಗಳಲ್ಲಿ ರೆಡಕ್ರಾಸ್ ಸ್ವಯಂ ಸೇವಕರು ಸೇವೆಗೈಯುತ್ತಾ ಜನ, ಜಾನುವಾರು ಮತ್ತು ಸಾರ್ವಜನಿರ ಆಸ್ತಿ-ಪಾಸ್ತಿ ಸಂರಕ್ಷಿಸುವಲ್ಲಿ ಪ್ರಮುಖ ಪಾತ್ರವಹಿಸಬೇಕಾಗಿರುವುದು ಇಂದಿನ ಅಗತ್ಯತೆಯಾಗಿದೆ. ಯುವಕರು ತಮ್ಮ ಆರೋಗ್ಯದ ಬಗ್ಗೆ ಜಾಗೃತಿ ವಹಿಸುತ್ತಾ, ಇಡೀ ಸಮಾಜಕ್ಕೆ ಹೆಮ್ಮಾರಿಯಾಗಿ ಕಾಡುತ್ತಿರುವ ಹೆಚ್,ಐ.ವ್ಹಿ ಮತ್ತು ಏಡ್ಸ್ ನಂತಹ ಮಾರಕ ರೋಗಗಳಿಂದ ದೂರವಿರಬೇಕು. ಯುವಕರು ಸಮಾಜದಲ್ಲಿ ಸದೃಢ ಭಾರತಕ್ಕಾಗಿ ಸದೃಢ ಯುವಕರು ಎಂಬಂತೆ ಆರೋಗ್ಯದ ಜಾಗೃತಿ ಮೂಡಿಸಬೇಕು. ಆರೋಗ್ಯಕರ, ಸ್ವಾಸ್ಥ್ಯ ಮತ್ತು ಸುಸ್ಥಿರ ಭಾರತಕ್ಕಾಗಿ ನಾವು-ನಿವೆಲ್ಲರೂ ಕಂಕಣಬದ್ಧರಾಗಿ ಹೋರಾಡಬೇಕು. ರೆಡ್ ಕ್ರಾಸ್ ಮತ್ತು ರೆಡ್ ಕ್ರೆಸೆಂಟ್ ಚಳುವಳಿಯ ಮೂಲಭೂತ ತತ್ವಗಳನ್ನು ಕಾರ್ಯರೂಪಕ್ಕೆ ತರಬೇಕು.



ವಿದ್ಯಾರ್ಥಿಗಳು ವಿದ್ಯಾರ್ಥಿದೆಸೆಯಲ್ಲಿಯೇ ರೆಡ್ ಕ್ರಾಸನಂತಹ ಕಾರ್ಯಕ್ರಮಗಳಲ್ಲಿ ಸಕ್ರೀಯವಾಗಿ ಪಾಲ್ಗೊಂಡು ರಾಷ್ಟ್ರೀಯ ಸೇವಾ ಮನೋಭಾವದ ಗುಣವನ್ನು ಬೆಳೆಸಿಕೊಳ್ಳಬೇಕು. ರಕ್ತದಾನ, ಪ್ರಥಮ ಚಿಕಿತ್ಸೆ, ತುರ್ತು ನೆರವು, ಆಹಾರ ಪೂರೈಕೆಯಂತಹ ಮಾನವೀಯ ಮತ್ತು ನಿಸ್ವಾರ್ಥ ಸೇವೆಗಳನ್ನು ಮಾಡುತ್ತಾ, ರಾಷ್ಟ್ರಕ್ಕಾಗಿ ತಮ್ಮ ಅಳಿಲು ಸೇವೆಯನ್ನು ಸಲ್ಲಿಸಬೇಕು. ಈ ಸಮಾಜ ನನಗೇನು ಕೊಟ್ಟಿದೆ ಎನ್ನುವದಕ್ಕಿಂತಲೂ ನನಗೆ ಏನೆಲ್ಲವನ್ನು ನೀಡಿದ ಈ ಸಮಾಜಕ್ಕೆ ನಾನೇನು ಕೊಡುಗೆ ನೀಡಬಲ್ಲೆನೆಂದು ಆತ್ಮಾವಲೋಕನ ಮಾಡಿಕೊಳ್ಳಬೇಕು.

2026 ನೇಯ ವರ್ಷದ ಘೋಷವಾಕ್ಯ "ಮಾನವೀಯತೆಯನ್ನು ಜೀವಂತವಾಗಿ-ರಿಸುವುದು (Make Humanity to be alive)"ಎಂಬ ಸಂದೇಶದೊಂದಿಗೆ ಆಚ-ರಿಸಲಾಗುತ್ತಿರುವ ಈ ರೆಡ್ ಕ್ರಾಸ ದಿನದ ಅಂಗವಾಗಿ ನಾವು ವಿಜ್ಞಾನ-ತಂತ್ರಜ್ಞಾನದಲ್ಲಿ ಅದೇಷ್ಟೋ ಮುಂದುವರೆದರೂ ಮಾನವೀಯತೆಯನ್ನು ಬಿಡಬಾರದು. ಸಂಕಷ್ಟ-ಕಷ್ಟದಲ್ಲಿರುವವರನ್ನು ರಕ್ಷಿಸುವ ಮತ್ತು ಅವಶ್ಯಕ ವೈದ್ಯಕೀಯ ಉಪಚಾರ ಮಾಡುವ ಮಾನವೀಯತೆಯ ಬೆಳೆಸಿಕೊಳ್ಳಬೇಕೆಂಬುದೇ ಈ ವರ್ಷದ ಆಚರಣೆಯ ಪ್ರಮುಖ ಉದ್ಧೇಶವಾಗಿದೆ.

### ಕೊನೆಯ ನುಡಿ

ಅಮೇರಿಕಾದ ರೆಡ್ ಕ್ರಾಸ್ ಸಂಸ್ಥಾಪಕ ಕ್ಲಾರಾ ಬಾರ್ಟನ್ ಅವರು, "ಕಷ್ಟ-ಸಂಕಷ್ಟ ಮತ್ತು ಜೀವನ್ಮರಣದ ಮಧ್ಯೆ ಹೋರಾಡುತ್ತಿರುವವರಿಗೆ ಸೇವೆ ಅಗತ್ಯವೆನಿಸಿದರೆ ನಿಸ್ವಾಥ-ರ್ತೆ ಮತ್ತು ಮಾನವೀಯತೆಯಿಂದ ಸೇವೆ ಸಲ್ಲಿಸುವುದನ್ನು ಮರೆಯಬೇಡ" ಎಂದು ಹೇಳಿದ್ದಾರೆ. ಜಾತಿ, ಮತ-ಪಂಥಗಳ ಬೇಧವಿಲ್ಲದೇ ಕಷ್ಟದಲ್ಲಿರುವವರಿಗೆ ಸಹಾಯ ಹಸ್ತ ಚಾಚೋಣ. ಯುದ್ಧ ಮತ್ತು ನೈಸರ್ಗಿಕ ವಿಕೋಪಗಳ ಸಮಯದಲ್ಲಿ ಜೀವನ್ಮರಣ ಮಧ್ಯೆ ಹೋರಾಡುತ್ತಿರುವವರಿಗೆ ಆಶಾಕಿರಣವಾಗಿ ಕಾರ್ಯನಿರ್ವಹಿಸುತ್ತಿರುವ ರೆಡ್ ಕ್ರಾಸ್ ಸ್ವಯಂ ಸೇವಕ-ರಿಗೆ ಗೌರವ ನಮನಗಳನ್ನು ಸಲ್ಲಿಸೋಣ. ಡ್ಯೂನಾಂಟ್ ಅವರ ಕನಸಿನ ಕೂಸು ರೆಡ್ ಕ್ರಾಸ್‌ನ ಧ್ಯೇಯೋದ್ಧೇಶಗಳನ್ನು ಈಡೇರಿಸುವಲ್ಲಿ ಅಹಿಂಸೆ, ಶಾಂತಿ ಮತ್ತು ನಿಸ್ವಾರ್ಥ ಸೇವೆಯ

ಲೇಖನ
■ ಮಲ್ಲಪ್ಪ. ಸಿ. ಖೊದ್ನಾಪೂರ (ತಿಕೋಟಾ)
ವಿಜಯಪುರ





# ಪ್ರಹ್ಲಾದ ಕುಳಲಿ ನಿಧನಕ್ಕೆ ಕೆಯುಡಬ್ಲ್ಯೂಜೆ ಸಂತಾಪ

■ ಉದಯರಶ್ಮಿ ದಿನಪತ್ರಿಕೆ



ಬೆಂಗಳೂರು: ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲಿ ಸುಧೀರ್ಘ ಅವಧಿಗೆ ಸೇವೆ ಸಲ್ಲಿಸಿದ್ದ ಹಾಗೂ ಮಾಜಿ ಮುಖ್ಯಮಂತ್ರಿ ಆರ್ ಗುಂಡೂರಾವ್ ಅವರ ಮಾಧ್ಯಮ ಕಾರ್ಯದರ್ಶಿಯಾಗಿ ಸೇವೆಸಲ್ಲಿಸಿದ್ದ ಪ್ರಹ್ಲಾದ್ ಕುಳಿಲಿ ಅವರು, ಕೆಂಗೇ–ರಿಯ ಅವರ ನಿವಾಸದಲ್ಲಿ ಕೊನೆಯುಸಿರೆಳೆದಿದ್ದಾರೆ.

ಹಿರಿಯ ಪತ್ರಕರ್ತರಾದ ಪ್ರಹ್ಲಾದ ಕುಳಲಿ ಅವರ ನಿಧನಕ್ಕೆ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘವು (ಕೆಯುಡಬ್ಲ್ಯೂಜೆ) ಸಂತಾಪ ವ್ಯಕ್ತಪಡಿಸಿದೆ.

ಕ್ರಿಯಾಶೀಲ ಪತ್ರಕರ್ತರಾಗಿದ್ದ ಅವರು, ವರದಿಗಾರರಕೂಟಕಟ್ಟುವಲ್ಲಿಯೂ ಕ್ರೀಯಾಶೀಲವಾಗಿ ಕೆಲಸ ಮಾಡಿದ್ದ ಅವರನ್ನು ಕೆಯುಡಬ್ಲ್ಯೂಜೆ ಮನೆಯಂಗಳದಲ್ಲಿ ಕಾರ್ಯ ಕ್ರಮದಲ್ಲಿ ಸನ್ಮಾನಿಸಲಾಗಿ–ತ್ತು ಎಂದು ಕೆಯುಡಬ್ಲ್ಯೂಜೆ ರಾಜ್ಯಾಧ್ಯಕ್ಷರಾದ ಶಿವಾನಂದ ತಗಡೂರು ಸ್ಮರಿಸಿದ್ದಾರೆ.

ಮೃತರ ಆತ್ಮಕ್ಕೆ ದೇವರು ಚಿರಶಾಂತಿ ಕರುಣಿಸಲಿ.

ಕುಟುಂಬದ ಸದಸ್ಯರಿಗೆ ದುಃಖ ಭರಿಸುವ ಶಕ್ತಿ ನೀಡಲಿ ಎಂದು ತಗಡೂರು ಪ್ರಾರ್ಥಿಸಿದ್ದಾರೆ.

# ಮೇ.12 ರಂದು ತಿಕೋಟಾದಲ್ಲಿ ರಾಷ್ಟ್ರೀಯ ವಿಚಾರ ಸಂಕಿರಣ



■ ಉದಯರಶ್ಮಿ ದಿನಪತ್ರಿಕೆ

ತಿಕೋಟಾ: ಬಹು ಭಾಷಾ ಕಥಾ ಸಾಹಿತ್ಯ ಪರಂಪರೆಯ ಮತ್ತು ವಿವಿಧ ಭಾಷೆಯ ಕಥಾ ಸಾಹಿತ್ಯ ವೈಭವವನ್ನು ಅರಿತುಕೊಳ್ಳುವುದು ಮುಖ್ಯ. ಅದಕ್ಕಾಗಿ ಪಟ್ಟಣದ ಬಿಎಲ್‌ಡಿಇ ಸಂಸ್ಥೆಯ ನೂತನ ಕಲಾ ಮಹಾವಿದ್ಯಾಲಯದಲ್ಲಿ ಮೇ.12 ರಂದು ರಾಷ್ಟ್ರೀಯ ವಿಚಾರ ಸಂಕಿರಣ ಏರ್ಪಡಿಸಲಾಗಿದೆ ಎಂದು ಐ.ಕ್ಯೂ.ಎ.ಸಿ ಸಂಯೋಜಕ ಬಿ ಎಸ್ ಬೆಳಗಲಿ ಹೇಳಿದರು.

ಗುರುವಾರ ಪಟ್ಟಣದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಭಾರತವು ವೈವಿದ್ಯೆಮಯ ಭಾಷೆ, ಸಂಸ್ಕೃತಿ, ಸಾಹಿತ್ಯ ಪರಂಪರೆಯ ನೆಲೆಯಾಗಿದೆ. ವಿಶ್ವದ ಪ್ರತಿಯೊಂದು ಭಾಷೆಯು ತನ್ನದೆ ಆದ ವೈಶಿಷ್ಟತೆಗಳನ್ನು ಹೊಂದಿದೆ. ಈ ಪರಂಪರೆ ಭಾರತ ದೇಶದ ಏಕತೆಗಾಗಿ ಸಂದೇಶ ಸಾರುತ್ತದೆ ಎಂದರು.


ಕಥೆಗಳು ಕೇವಲ ಮನರಂಜನೆಯ ಸಾಧನವಲ್ಲ, ಸಮಾಜದ ದರ್ಪಣವಾಗಿಯೂ, ಚಿಂತನೆಗೆ ದಾರಿಯಾಗಿಯೂ ಕಾರ್ಯನಿರ್ವಹಿಸುತ್ತವೆ. ಈ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಲೇಖನ ಮಂಡಿಸುವವರು ಅಧ್ಯಯನ ಕೇಂದ್ರಿಕರಿಸಿ ಸಂಶೋಧನಾ ಲೇಖನಗಳನ್ನು ರಚಿಸಬಹುದು.

ವಿಷಯಗಳ ಜೊತೆಯಲ್ಲಿ ನಿಮ್ಮ ಅಧ್ಯಯನಕ್ಕೆ ಲಭಿಸುವ ಕಥಾಸಾಹಿತ್ಯದ ಚಿಂತನೆಗಳ ಬರಹಗಳಿಗೂ ಇಲ್ಲಿ ಅವಕಾಶ ಕಲ್ಪಿಸಲಾಗುವದು. ಕಾರಣ ಈ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸಾಹಿತಿಗಳು ಬಾಗವಹಿಸಬೇಕೆಂದು ತಿಳಿಸಿದರು.

ಈ ವೇಳೆ ಪ್ರಾಂಶುಪಾಲ ಪ್ರೊ ಪಿ ಎಸ್ ತೋಳನೂರ, ಪ್ರಾಧ್ಯಾಪಕರಾದ ಡಾ ಎಸ್ ಎಲ್ ರಾಠೋಡ, ಡಾ. ಎಂ ಬಿ ಹೂಗಾರ, ಡಾ. ಸಂತೋಷ ನವಲಗುಂದ, ಡಾ. ಶ್ರೀನಿವಾಸ ದೊಡ್ಮನಿ, ಡಾ. ರವಿಚಂದ್ರ ವಾಲೀಕಾರ, ಡಾ. ಕೃಷ್ಣಮೂರ್ತಿ, ಎಲ್ ಬಿ ದೇಸಾಯಿ, ಜಿ ಎಂ ಕಾಂಬಳೆ, ಸುಶಾಂತ ಜವನಾರ, ಸ್ವಪ್ನಾ ಹಾಲಳ್ಳಿ, ಲಕ್ಷ್ಮಿ ಕಾತ್ರಾಳ, ಎಸ್ ಬಿ ಉಪ್ಪಾರ, ನಾಗರಾಜ ನರಳೆ, ದಯಾನಂದ ರೇಷ್ಮೀ ಮತ್ತಿತರರು ಉಪಸ್ಥಿತರಿದ್ದರು.

# ಇಂಡಿಯಲ್ಲಿ ಎಟಿಎಂ ಮಶೀನು ಹಣವಿಲ್ಲದೆ ಖಾಲಿ ಖಾಲಿ

■ ಉದಯರಶ್ಮಿ ದಿನಪತ್ರಿಕೆ




ಇಂಡಿ: ನಗರ ಹಾಗೂ ತಾಲೂಕಿನ ಗ್ರಾಮಗಳಲ್ಲಿ ಇರುವ ಎಟಿಎಂ ಗಳಲ್ಲಿ ಹಣವಿಲ್ಲದೆ ಖಾಲಿ ಖಾಲಿ. ಇದರಿಂದ ಹಣ ಪಡೆಯಬೇಕೆಂಬ ಗ್ರಾಹಕ–ರಿಗೆ ನಿರಾಶೆಯಾಗುತ್ತಿದೆ. ಇದು ಕೇವಲ ಒಂದು ಎರಡು ದಿವಸದ ಸಮಸ್ಯೆ ಅಲ್ಲ ಕಳೆದ ಒಂದು ತಿಂಗಳಿಂದ ಹಣವಿಲ್ಲ.

ಬೆಳಗ್ಗೆ 9 ಗಂಟೆಗೆ ನೌಕ–ರಿಗೆ ಅಥವಾ ಕೆಲಸಕ್ಕೆ ಹೋಗಿ 4 ಅಥವಾ 5 ಗಂಟೆಗೆ ಬರುವವರಿಗೆ ತೊಂದರೆಯಾಗುತ್ತಿದೆ.

ಉದ್ಯೋಗದ ಸಮಯದಲ್ಲಿ ಅವರು ಬ್ಯಾಂಕಿಗೆ ಬಂದು ಹಣ ಪಡೆಯುವದು ಆಗುವದಿಲ್ಲ, ಅಥವಾ ಬೇರೆ ಗ್ರಾಮಗಳಲ್ಲಿ ಕೆಲಸ ಮಾಡುವವರು ಹಣ ತೆಗೆಯಲೆಂದೇ ಇಂಡಿಗೆ ಬರುವ ಪರಿಸ್ಥಿತಿ ನಿರ್ಮಾಣವಾಗಿದೆ.

ಸೆಂಟ್ರಲ್ ಬ್ಯಾಂಕ ಡಿಜಿಟಲ್ ಕರೆನಸಿರ್ಝು ಸಿಬಿಡಿಸಿ ಇವರು ಬ್ಯಾಂಕಿನಿಂದ ಆಗಲೀ ಇನ್ನಿತರ ಮೂಲಗಳಿಂದ ಹಣ ವರ್ಗಾಯಣೆ ಕಡಿಮೆಯಾಗಬೇಕು, ಮತ್ತು ಫೋನ್ ಪೇ ಮೂಲಕ ಹಣ ವರ್ಗಾಯಣೆ ಆಗಬೇಕು ಎಂಬ ವ್ಯವಸ್ಥೆ ಮಾಡುವ ಯೋಚನೆಯಲ್ಲಿದ್ದು ಹಣ ಎಟಿ–ಎಂನಲ್ಲಿ ಹಾಕುತ್ತಿಲ್ಲ ಎಂದೇ ಹೇಳಲಾಗುತ್ತಿದೆ.

ನಗರದ ಎಸ್.ಬಿ.ಐ, ಕೆನರಾ ಬ್ಯಾಂಕು, ಯುನಿಯನ್ ಬ್ಯಾಂಕ, ಬ್ಯಾಂಕ ಆಫ್ ಇಂಡಿಯಾ, ಕರ್ನಾಟಕ, ಕೋಟಕ ಮಹೀಂದ್ರಾ ಸೇ–ರಿದಂತೆ ಅನೇಕ ಬ್ಯಾಂಕುಗಳಲ್ಲಿ ಪ್ರತಿ ದಿನ ಗ್ರಾಹಕರು ತಿರುಗಿ ಸುಸ್ತಾಗುತ್ತಿದ್ದಾರೆ ಆದರೆ ಹಣ ದೊರೆಯುತ್ತಿಲ್ಲ.

ಅರ್ಜೆಂಟಾಗಿ ಹಣ ಬೆಕು ಎನ್ನುವವ–ರಿಗೆ ತೊಂದರೆಯಾಗುತ್ತಿದೆ ಎಂಬುದು ಗ್ರಾಹಕರ ಅಳಲು.

ಯಾವದೇ ವ್ಯವಸ್ಥೆ ಬದಲಾವಣೆ ಮಾಡುವ ಮೊದಲು ಗ್ರಾಹಕರಿಗೆ ತಿಳುವಳಿಕೆ ನೀಡಬೇಕು. ನಂತರ ಸ್ವಲ್ಪ ಸಮಯ ನೀಡಿ ಬದಲಾವಣೆ ಮಾಡಬೇಕು.

ಈಗ ಒಮ್ಮಿಂದೊಮ್ಮಲೆ ಬ್ಯಾಂಕಿನಿಂದ ಎಟಿಎಂ ನಲ್ಲಿ ಹಣ ಬರದೇ ಇರುವದು ಗ್ರಾಹಕರಿಗೆ ತೊಂದರೆ ಯಾಗುತ್ತಿದೆ ಎಂಬ ಮಾತು ಎಲ್ಲ ಕಡೆಗಳಿಂದ ಕೇಳಿ ಬರುತ್ತಿದೆ.

# ನಕಲಿ ಜಾತಿ ಪ್ರಮಾಣ ಪತ್ರ ನೀಡಿದವರ ಮೇಲೆ ಕ್ರಮಕ್ಕೆ ಆಗ್ರಹಿಸಿ ಮನವಿ

## ಅಖಿಲ ಭಾರತೀಯ ವಾಲ್ಮೀಕಿ ಸಮಾಜ ಸೇವಾ ಸಂಘದಿಂದ ಜಿಲ್ಲಾಧಿಕಾರಿ ಡಾ.ಆನಂದ್ ಕೆ ಅವರಿಗೆ ಮನವಿ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ಜಿಲ್ಲೆಯ ದೇವರ ಹಿಪ್ಪರಗಿ ತಾಲೂಕಿನ ಕೆಲವರಿಗೆ ಪರಿಶಿಷ್ಟ ಪಂಗಡದ ವಾಲ್ಮೀಕಿ ಜಾತಿಯ ನಕಲಿ ಜಾತಿ ಪ್ರಮಾಣ ನೀಡಿರುವವರ ಮೇಲೆ ಕ್ರಮಕ್ಕೆ ಆಗ್ರಹಿಸಿ ಅಖಿಲ ಭಾರತೀಯ ವಾಲ್ಮೀಕಿ ಸಮಾಜ ಸೇವಾ ಸಂಘದಿಂದ ಜಿಲ್ಲಾಧಿಕಾರಿ ಡಾ.ಆನಂದ ಕೆ ಹಾಗೂ ಡಿವೈಎಸ್ಪಿ ನಾಗ–ರಿಕ ಹಕ್ಕುಗಳ ಜಾರಿ ನಿರ್ದೇಶನಾಲಯ ಅವರಿಗೆ ಮನವಿ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಸಂಘದ ರಾಜ್ಯಾಧ್ಯಕ್ಷ ಮಲ್ಲಿಕಾರ್ಜುನ ಬಟಗಿ ಮಾತನಾಡಿ, ಜಿಲ್ಲೆಯ ದೇವರ ಹಿಪ್ಪರಗಿ ತಾಲೂಕಿನ ಕೊಂಡಗೂಳಿ ಗ್ರಾಮದ ಲಚ್ಚೆಪ್ಪ ಬಸಪ್ಪ ಬಸವಪಟ್ಟಣ ಇವರು ಹಿಂದೂ ಕಬ್ಬಲಿಗ ಜಾತಿಗೆ ಸೇರಿದವರಾಗಿರುತ್ತಾರೆ. ಆದರೆ ಇವರ ಮಗ ಮಹಾಂತೇಶ ಲ. ಬಸವಪಟ್ಟಣ ಇವನ ಜಾತಿ ಹಾಗೂ ಜನ್ಮ ದಿನಾಂಕ ದೃಢೀಕರಣ ಪತ್ರದಲ್ಲಿ ಹಿಂದೂ ವಾಲ್ಮೀಕಿ ಎಂದು ಜಾತಿ ಪ್ರಮಾಣ ಪತ್ರವನ್ನು ಪಡೆದುಕೊಂಡು ವಾಲ್ಮಿಕಿ ಸಮಾಜಕ್ಕೆ ಅನ್ಯಾಯ ಮಾಡಿರುತ್ತಾರೆ. ಜಿಲ್ಲೆಯಲ್ಲಿ ಇದೇ ರೀತಿ ಸುಮಾರು 5700 ನಕಲಿ ಜಾತಿ ಪ್ರಮಾಣ ಪತ್ರಗಳನ್ನು ತಳವಾರ, ಅಂಬಿಗ, ಕಬ್ಬಲಿಗ, ಡೋಹರ ಕೋಳಿ, ಠೋಕರೆ ಕೋಳಿ, ನಾಯ್ಕಡ ಅಂತ ಹೇಳಿ ಈ ಹೆಸರಿನ ಮೇಲೆ ನಕಲಿ ಜಾತಿ ಪ್ರಮಾಣ ಪತ್ರವನ್ನು ಪಡೆದುಕೊಂಡು ನಿಜವಾದ ವಾಲ್ಮೀಕಿ ಜನಾಂಗಕ್ಕೆ ಹಾಗೂ ಸರ್ಕಾರಕ್ಕೆ ಮೋಸಮಾಡಿ ಸರ್ಕಾರದ ಯೋಜನೆಗಳನ್ನು ಹಾಗೂ ಅಟ್ರಾಸಿಟಿ ಕೇಸ್‌ಗಳನ್ನು ಹಾಕಿ ಅಮಾಯಕ ಜನರನ್ನು ಮೋಸ ಮಾಡಿರುತ್ತಾರೆ. ಈ ಕು–ರಿತು ಸಾಕಷ್ಟು ಸಲ ಮನವಿ ಕೊಟ್ಟರೂ ಯಾವುದೇ ಪ್ರಯೋಜನವಾಗಿರುವುದಿಲ್ಲ. ಈ ಕುರಿತು ಇತ್ತೀಚೆಗೆ ವಿಜಯಪುರ ಜಿಲ್ಲೆಗೆ ಆಗಮಿಸಿದ ಎಸ್ಟಿ ಎಸ್ಟಿ ಆಯೋಗದ ಅಧ್ಯಕ್ಷರ ಸಭೆಯಲ್ಲಿ ಬಹಿರಂಗವಾಗಿ ಹೇಳಲಾಗಿದ್ದು ಇದರ ಕುರಿತು ಯಾವುದೇ ಕ್ರಮ ಕೈಗೊಂಡಿಲ್ಲ. ಕಾರಣ ಕೂಡಲೇ ತಪ್ಪಿತಸ್ಥ ಅಧಿಕಾರಿಗಳ ಮೇಲೆ ಹಾಗೂ ನಕಲಿ ಜಾತಿ ಪ್ರಮಾಣ ಪತ್ರವನ್ನು ಪಡೆದುಕೊಂಡವರ ಹಾಗೂ ನೀಡಿದವರ ಮೇಲೆ ಕ್ರಿಮಿನಲ್ ಪ್ರಕರಣ ದಾಖಲು ಮಾಡಬೇಕೆಂದು ಆಗ್ರಹಿಸಿದರು. ಈ ಸಂದರ್ಭದಲ್ಲಿ ಹಣಮಂತ ಜೋಗಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಮನರೇಗಾ ಯೋಜನೆ ಪರಿಣಾಮಕಾರಿ ಜಾರಿಗೆ ತಾಪಂ ಇಓ ಸೂಚನೆ

■ ಉದಯರಶ್ಮಿ ದಿನಪತ್ರಿಕೆ



ತಿಕೋಟಾ: ಗ್ರಾಮೀಣ ಬಡಜನರಿಗೆ ಉದ್ಯೋಗ ಭದ್ರತೆ ಒದಗಿಸುವ ಮಹಾತ್ಮ ಗಾಂಧಿ ನರೇಗಾ ಯೋಜನೆಯನ್ನು ಪರಿಣಾಮಕಾರಿಯಾಗಿ ಜಾರಿಗೆ ತರಬೇಕು ಎಂದು ತಾಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾ–ರಿಗಳಾದ ಬಸವಂತರಾಯಗೌಡ ಬಿರಾದಾರ ಅವರು ಅಧಿಕಾರಿಗಳಿಗೆ ಸೂಚಿಸಿದರು.

ತಿಕೋಟಾ ತಾಲೂಕು ಪಂಚಾಯತಿ ಸಭಾಂಗಣದಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಪ್ರಗತಿ ಪರಿಶೀಲನಾ ಸಭೆಯಲ್ಲಿ ಅವರು ಮಾತನಾಡಿದರು.

ಉದ್ಯೋಗ ಮಾಡಿದ ಕೂಲಿಕಾರರ ವೇತನ ಪಾವತಿಯಲ್ಲಿ ಯಾವುದೇ ವಿಳಂಬವಾಗದಂತೆ ಕ್ರಮ ಕೈಗೊಳ್ಳಬೇಕು, ಪ್ರತಿ ಹಂತದಲ್ಲೂ ಪಾರದರ್ಶಕತೆ ಕಾಪಾಡಬೇಕು. ಎಂಐಎಸ್‌ನಲ್ಲಿ ಸಮಯಕ್ಕೆ ಸರಿಯಾಗಿ ಮಾಹಿತಿ ದಾಖಲಿಸಬೇಕು ಎಂದು ಸೂಚಿಸಿದರು.

ಮನರೇಗಾ ಯೋಜನೆಯಡಿ ಗ್ರಾಮ ಪಂಚಾಯತಿವಾರು ಗುರಿ ನಿಗದಿಪಡಿಸಿರುವ ಮಾನವ ದಿನಗಳ ಸೃಜನೆ ಮಾಡಿ ಗುರಿ ಸಾಧಿಸಲು ಎಲ್ಲರೂ ಕ್ರಮ ವಹಿಸಬೇಕು. ನರೇಗಾ ಕೆಲಸದ ಬೇಡಿಕೆ ಸಲ್ಲಿಸಿದ ಪ್ರತಿಯೊಬ್ಬ ಅರ್ಹ ಫಲಾನುಭವಿಗೆ ಕಾಲಮಿತಿಯೊಳಗೆ ಉದ್ಯೋಗ ಒದಗಿಸಬೇಕು, ಕಾಮಗಾರಿಗಳನ್ನು ನಿಗದಿತ ಸಮಯದೊಳಗಾಗಿ ಪೂರ್ಣಗೊಳಿಸುವತ್ತ ವಿಶೇಷ ಗಮನ ಹರಿಸಬೇಕು

ಈಗಾಗಲೇ ಅನುಮೋದನೆಗೊಂಡ ಪ್ರಗತಿ ಹಂತದ ಕೂಲಿ ಆಧಾರಿತ ಸಮುದಾಯ ಹಾಗೂ ವೈಯಕ್ತಿಕ ಕಾಮಗಾರಿಗಳಡಿ ಪ್ರತಿ ಗ್ರಾ.ಪಂ.ಗಳಲ್ಲಿ ಎನ್.ಎಂ.ಆರ್. ಜನರೇಟ್ ಮಾಡಿ ಗ್ರಾಮೀಣ ಕೂಲಿಕಾರರಿಗೆ ಉದ್ಯೋಗ ಒದಗಿಸಬೇಕು. ಗ್ರಾಮೀಣ ಪ್ರದೇಶಗಳಲ್ಲಿ ಎಷ್ಟು ಜನರು ನರೇಗಾ ಯೋಜನೆಯ ಮೇಲೆ ಅವಲಂಬಿತರಾಗಿದ್ದಾರೆ ಎನ್ನುವದನ್ನು ಗುರುತಿಸಿ ಅಂತಹ ಕುಟುಂಬಗಳಿಗೆ ಉದ್ಯೋಗ ಒದಗಿಸಿ ನಿಗದಿತ ಗುರಿ ಸಾಧಿಸಲು ಕ್ರಮ ಕೈಗೊಳ್ಳಬೇಕು ಎಂದರು.

ತಾಲೂಕಿನ ಎಲ್ಲಾ 14 ಗ್ರಾಮ ಪಂಚಾಯಿತಿ ವ್ಯಾಪ್ತಿಗಳಲ್ಲಿ ಸಮುದಾಯ ಕಾಮಗಾರಿಗಳನ್ನು ಆರಂಭಿಸಿ ಕೂಲಿಕಾರರ ಫೇಸ್ ಅಥೆಂಟಿಕೇಷನ್ ಅನ್ನು ಎರಡು ದಿನಗಳಲ್ಲಿ ಕಡ್ಡಾಯವಾಗಿ ಶೇ 100ರಷ್ಟು ಆರಂಭಿಸಬೇಕು. ಉದ್ಯೋಗ ಒದಗಿಸಿರುವ ಎಲ್ಲಾ ಕೂಲಿಕಾರರಿಗೆ ನಿಗದಿತ ಸಮಯದಲ್ಲಿ ಕೂಲಿ ಪಾವತಿಸಲು ಕ್ರಮ ಕೈಗೊಳ್ಳಬೇಕು. ಇಲ್ಲಿಯವರೆಗಿನ ಪ್ರಗತಿ ಹಂತದಲ್ಲಿರುವ ಎಲ್ಲ ಕಾಮಗಾ–ರಿಗಳನ್ನು ಕೂಡಲೇ ಶೇ 100 ರಷ್ಟು ಪೂರ್ಣಗೊಳಿಸಬೇಕು ಎಂದರು.

ಸಭೆಯಲ್ಲಿ ಸಹಾಯಕ ನಿರ್ದೇಶಕರಾದ ಬಸವರಾಜ ಸಂಕಗೊಂಡ, ತಾಂತ್ರಿಕ ಸಂಯೋಜಕ ನಾಗರಾಜ ಕಲಕೇರಿ, ತಾಲೂಕು ಐಇಸಿ ಸಂಯೋಜಕ ಕಲ್ಲಪ್ಪ ನಂದರಗಿ, ತಾಲೂಕು ಎಮ್.ಐ.ಎಸ್ ಸಂಯೋಜಕಿ ಅಪರ್ಣಾ ಬದಾಮಿ ಸೇರಿದಂತೆ ಇತರರು ಹಾಜರಿದ್ದರು.

# ಎಲ್ಲ ಜಾತಿ–ಜನಾಂಗಗಳಿಗೆ ಸಮಸ್ಥಾನ ನೀಡುವ ಕಾಂಗ್ರೆಸ್

## ಕೈಗಾರಿಕೆ, ಮೂಲಸೌಲಭ್ಯ ಅಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಂ. ಬಿ. ಪಾಟೀಲ ಹೇಳಿಕೆ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ಕಾಂಗ್ರೆಸ್ ಪಕ್ಷವೆಂಬುದು ಅನುಭವ ಮಂಟಪ. ಈ ಅನುಭವ ಮಂಟಪದಲ್ಲಿ ಎಲ್ಲ ಜಾತಿ–ಜನಾಂಗಗಳಿಗೆ ಸಮಸ್ಥಾನ. ಆ ಸಾಮಾಜಿಕ ಹಿನ್ನಲೆಯನ್ನು ಅನುಸರಿಸಿ ಬಹಳಷ್ಟು ಹಿಂದುಳಿದ ಸಮಾಜಗಳು ಇಂದು ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಗೊಳ್ಳುತ್ತಿದ್ದಾರೆ. ಈ ಕಾರ್ಯ ಮುಂದುವರೆದಿದ್ದು, ಮುಂದಿನ ದಿನಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸಮಾಜಗಳು ಕಾಂಗ್ರೆಸ್ ಪಕ್ಷದ ತೆಕ್ಕೆಗೆ ಬರಲಿವೆ ಎಂದು ಕೈಗಾರಿಕೆ, ಮೂಲಸೌಲಭ್ಯ ಅಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಂ. ಬಿ. ಪಾಟೀಲ ಹೇಳಿದ್ದಾರೆ.

ಗುರುವಾರ ವಿಜಯಪುರ ನಗರದ ಗೃಹ ಕಚೇರಿಯಲ್ಲಿ ತಿಕೋಟಾ ಪಟ್ಟಣದ ತಳವಾರ ಸಮುದಾಯದ ನಾನಾ ಮುಖಂಡರನ್ನು ಕಾಂಗ್ರೆಸ್ಸಿಗೆ ಬರಮಾಡಿಕೊಂಡು ಅವರು ಮಾತನಾಡಿದರು.

ಮತಕ್ಷೇತ್ರದಲ್ಲಿಕೈಗೊಳ್ಳಲಾದಅಭಿವೃದ್ಧಿಯೋಜನೆಗಳು ಸಕಲ ಸಮುದಾಯಗಳ ಮೆಚ್ಚುಗೆಗೆ ಪಾತ್ರವಾಗಿದ್ದು, ತಿಕೋಟಾ ತಳವಾರ ಸಮುದಾಯದ ಪ್ರಮುಖ ಮುಖಂಡರು ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಯಾಗಿರುವುದು ಇದಕ್ಕೆ ಸಾಕ್ಷಿಯಾಗಿದೆ. ಬಬಲೇಶ್ವರ ಮತಕ್ಷೇತ್ರದಲ್ಲಿ ಇಂದು ರಾಜಕೀಯ ಚಿತ್ರಣವೇ ಬದಲಾಗಿದೆ. ನುಡಿದಂತೆ ನಡೆಯುವ ನಮ್ಮ ಗ್ಯಾರಂಟಿ ಸರಕಾರದ ಜನಪರ ಆಡಳಿತಕ್ಕೆ ಮನಸೋತು, ಬಿಜೆಪಿಯ ಪ್ರಮುಖರು, ಕಾರ್ಯಕರ್ತರು ತಮ್ಮ ಪಕ್ಷಕ್ಕೆ ಗುಡ್ ಬೈ ಹೇಳಿ ಕಾಂಗ್ರೆಸ್ ಗೆ ಜೈ ಎಂದಿದ್ದಾರೆ. ನಮ್ಮ ಅಭಿವೃದ್ಧಿಯ ಹಾದಿ ಮತ್ತು ಗಟ್ಟಿಯಾದ ಸಿದ್ಧಾಂತವನ್ನು ನಂಬಿ ಬಂದ ಈ ಎಲ್ಲಾ ನಾಯಕರನ್ನು ಆತ್ಮೀಯವಾಗಿ ಸ್ವಾಗತಿಸುತ್ತೇನೆ. ಅವರ ಸೇರ್ಪಡೆಯಿಂದ ಕಾಂಗ್ರೆಸ್ ಪಕ್ಷಕ್ಕೆ ಮತ್ತಷ್ಟು ಬಲ ಬಂದಿದೆ. ಮುಂಬರುವ ದಿನಗಳಲ್ಲಿ ಅವರ ಬೇಡಿಕೆಗಳಿಗೆ ಸ್ಪಂದಿಸಲಾಗುವುದು ಎಂದು ಸಚಿವರು ತಿಳಿಸಿದರು.

ಈ ಸಂದರ್ಭದಲ್ಲಿ ಮುಖಂಡರಾದ ಸುರೇಶ ತೊರವಿ, ಎಚ್. ಎಲ್. ತಳವಾರ, ಪರಶುರಾಮ ಕೋಳಿ, ಗಣಪತಿ ತೋರವಿ, ಅಪ್ಪಸಾಹೇಬ ಡ್ಯಾಬೇರಿ, ದಯಾನಂದ ಶಿರಹಟ್ಟಿ ಪ್ರಕಾಶ ಹಾಲಳ್ಳಿ, ಭೀಮು ಹಾಲಳ್ಳಿ, ರಮೇಶ ಗುಡದಿನ್ನಿ, ವಿಲಾಸ ಮಾಳಿ, ನಾಗಪ್ಪ ಮಾಳಿ, ಶಾಂತಾಭಾಯಿ ತಳವಾರ, ಗೀತಾ ತೋರವ, ಪುಷ್ಪಾ ತೋರವಿ, ಮಂಗಲಾ ತಳವಾರ, ಮನಿಷಾ ತಳವಾರ, ಕವಿತಾ ಹಾಲಳ್ಳಿ ಸೇರಿದಂತೆ ನೂರಾರು ಕಾರ್ಯಕರ್ತರು ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಯಾದರು.

ಈ ವೇಳೆ ಮುಖಂಡತಾದ ಬಿ. ಜಿ. ವಿಭೂತಿ, ಜೆ. ಎಂ. ಪಾಟೀಲ, ಮಮ್ಮು ಮುಜಾವರ, ಬಾಪು ಚೌಧರಿ, ರಾಜೂಗೌಡ ಪಾಟೀಲ, ಬಿ. ಎಲ್. ನಾಟೀಕಾರ ಮುಂತಾದವರು ಉಪಸ್ಥಿತರಿದ್ದರು.

# ಸಂಶೋಧನೆಯಿಂದ ಸಮಾಜಮುಖಿ ಫಲಿತಾಂಶಗಳು ಹೊರಬರಲಿ

■ ಉದಯರಶ್ಮಿ ದಿನಪತ್ರಿಕೆ

**ವಿಜಯಪುರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ವಾಣಿಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥ ಪ್ರೊ. ಎಂ. ಎಸ್.ಖೊದ್ನಾಪೂರ ಅಭಿಮತ**



ವಿಜಯಪುರ: ಮಕ್ಕಳಿಗೆ ವಿದ್ಯಾರ್ಥಿದೆಸೆಯಲ್ಲಿಯೇ ಸಂಶೋಧನೆಯಲ್ಲಿ ಆಸಕ್ತಿ, ಅಭಿರುಚಿ ಮತ್ತು ಹೊಸ ವಿಷಯಗಳತ್ತ ಬೆಳಕು ಚೆಲ್ಲುವಂತೆ ಪ್ರೇರೇಪಿಸಬೇಕು. ಉನ್ನತ ಶಿಕ್ಷಣ ಗುರಿಯು ಕೇವಲ ವಿದ್ಯಾರ್ಥಿಗಳು ವಿಷಯ ಜ್ಞಾನ, ಅಂಕ ಮತ್ತು ಪದವಿ ಪಡೆಯುವದಕ್ಕಾಗಿ ಸಿಮೀತಗೊಳ್ಳಬಾರದು. ವಿದ್ಯಾರ್ಥಿಗಳು ತಮ್ಮಲ್ಲಿರುವ ಸುಪ್ತ ಪ್ರತಿಭೆ, ಜ್ಞಾನ, ಕ್ರೀಯಾಶೀಲತೆ ಮತ್ತು ಸೃಜನಾತ್ಮಕತೆ, ವೈಚಾರಿಕತೆ, ಚಿಂತನಾಶಕ್ತಿ, ವಿಷಯ ಮಂಡನಾ ಕಲೆ, ಕೌಶಲ್ಯಗಳನ್ನು ಹೊರಹಾಕಲು ಹಾಗೂ ವಿದ್ಯಾರ್ಥಿಗಳ ಪ್ರತಿಭೆ ಅನಾವರಣಗೊಳ್ಳಲು ಉತ್ತಮ ವೇದಿಕೆಯನ್ನು ಕಲ್ಪಿಸಿಕೊಡಬೇಕೆಂದು ವಿಜಯಪುರ ಸರ್ಕಾರಿ ಪ್ರಥ–ಮ ದರ್ಜೆ ಕಾಲೇಜಿನ ಪ್ರಭಾರಿ ಪ್ರಾಂಶುಪಾಲ ಡಾ. ಚಿದಾನಂದ ಆನೂರ ಅವರು ಅಭಿಪ್ರಾಯಪಟ್ಟರು.

ಅವರು ನಗರದ ನವಭಾಗದಲ್ಲಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಬಿಎ (ಐಚ್ಛಿಕ ಕನ್ನಡ) ಅಂತಿಮ ವರ್ಷದ ವಿದ್ಯಾರ್ಥಿಗಳಿಗಾಗಿ ಆಯೋಜಿಸಿದ್ದ "ನಿಯೋಜಿ ಕಾರ್ಯದ ಮೌಖಿಕ ಸಂದರ್ಶನ" ಕಾರ್ಯಕ್ರಮದಲ್ಲಿ ಮಾತನಾಡುತ್ತಿದ್ದರು.

ಅತಿಥಿಗಳಾದ ವಾಣಿಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥ ಪ್ರೊ. ಎಂ.ಎಸ್.ಖೊದ್ನಾಪೂರ ಅವರು ಮಾತನಾಡುತ್ತಾ, ಇಂದಿನ ಜಗತ್ತು ಹೊಸತನ, ನಾವಿನ್ಯತೆ, ಸಂಶೋಧನೆ ಮತ್ತು ಅನ್ವೇಷಣೆಗೆ ಆಹ್ವಾನ ಮತ್ತು ಅವಕಾಶಗಳನ್ನು ನೀಡುತ್ತಿದೆ. ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯು ವಿದ್ಯಾರ್ಥಿಗಳಲ್ಲಿ ವಿಷಯ ಜ್ಞಾನದೊಂದಿಗೆ ಕಲಿತ ವಿಷಯಗಳ ಪ್ರಾಯೋಗಿಕ ಅಳವಡಿಕೆ, ಸೃಜನಾತ್ಮಕತೆ ಮತ್ತು ಕ್ರಿಯಾಶೀಲತೆಯೊಂದಿಗೆ ಆಯ್ಕೆ ಮಾಡಿಕೊಂಡ ಯಾವುದೇ ವಿಷಯದ ಮೇಲೆ ಸಂಶೋಧನೆ ಕೈಗೊಳ್ಳಬೇಕು. ಸಂಶೋಧನೆಯು ಗುಣಾತ್ಮಕವಾಗಿದ್ದು, ಅದು ಸದಾ ಸಮುದಾಯಕ್ಕೆ ಏನನ್ನಾದರೂ ಕೊಡುಗೆ ನೀಡುವಂತಿರಬೇಕು. ಸಂಶೋಧನೆಯಿಂದ ಹೊರಹೊಮ್ಮುವ ಫಲಿತಾಂಶವು ಸಮಾಜ–ಕ್ಕೆ ಪ್ರಯೋಜನಕಾರಿ ಮತ್ತು ಸರ್ಕಾರ, ಸಂಘ–ಸಂಸ್ಥೆ, ವಾಣಿಜ್ಯ–ವ್ಯಾಪಾರ ಮತ್ತು ಇನ್ನಿತರ ಸಂಸ್ಥೆಗಳಿಗೆ ಭವಿಷ್ಯಕ್ಕೆ ದಾರಿದೀಪವಾಗಿರಬೇಕು. ಅಂದಾಗ ಕೈಗೊಂಡ ಸಂಶೋಧನೆಯ ಉದ್ದೇಶ ಮತ್ತು ಗುರಿಯು ನಿಜಕ್ಕೂ ಅರ್ಥಪೂರ್ಣವಾಗುತ್ತದೆ ಎಂದರು.

ಇನ್ನೊರ್ವ ಅತಿಥಿ ಡಾ. ಬಿ.ಎನ್.ಶಾಡದಳ್ಳಿ ಅವರು ಮಾತನಾಡಿದರು.

ನಂತರ ಮೌಖಿಕ ಸಂದರ್ಶನದ ಬಾಹ್ಯ ಪರೀಕ್ಷಕರಾಗಿ ಆಗಮಿಸಿದ ಪ್ರೊ. ಶ್ರೀಶೈಲ ಬಳವಾಟ ಅವರು ಐಚ್ಛಿಕ ಕನ್ನಡ ವಿಷಯದ ಮೇಲೆ ವಿದ್ಯಾರ್ಥಿಗಳು ಸಲ್ಲಿಸಿದ ಪ್ರಾಜೆಕ್ಟ ವರದಿಗಳನ್ನು ಮೌಲ್ಯಮಾಪನ ಮಾಡಿ, ವಿಷಯದ ಆಯ್ಕೆ, ಆಳವಾದ ವಿಷಯ ಜ್ಞಾನ, ಸಂಶೋಧನಾ ವಿಧಾನ, ವಿಷಯ ಮಂಡನೆ, ಸಂವಹನ ಮತ್ತು ಸಂದರ್ಶನ ಕಲೆ–ಕೌಶಲ್ಯಗಳ ಬಗ್ಗೆ ವಿದ್ಯಾರ್ಥಿಗಳಿಗೆ ಪ್ರಶ್ನೆಗಳನ್ನು ಕೇಳಿ ಮೌಲ್ಯೀಕರಿಸಿದರು.

ಈ ಕಾರ್ಯಕ್ರಮದಲ್ಲಿ ಕನ್ನಡ ವಿಭಾಗದ ಪ್ರೊ. ಸಿದ್ರಾಮ ಯರನಾಳ, ಡಾ, ಎಂ. ಕುಮಾರಸ್ವಾಮಿ, ಡಾ. ಐ.ಎಸ್.ತೇಲಿ, ಡಾ. ಸುನೀತಾ ಚವ್ಹಾಣ ಇನ್ನಿತರರು ಸಹ ವೇದಿಕೆಯ ಮೇಲಿದ್ದರು. ಕಾರ್ಯಕ್ರಮದಲ್ಲಿ ಬಿಎ (ಐಚ್ಛಿಕ ಕನ್ನಡ) ಅಂತಿಮ ವರ್ಷದ ಎಲ್ಲ ವಿದ್ಯಾರ್ಥಿಗಳು ಮೌಖಿಕ ಸಂದರ್ಶನದಲ್ಲಿ ಭಾಗವಹಿಸಿದ್ದರು.

**Printed by:** AVINASH BIDARI, **Published and owned by:** SHAILA INDUSHEKHAR MANUR **Printed at:** ARUN OFFSET PRINTERS,No.23, Sanjaygandhi Nagar, Indi Road, Vijayapura - 586101, Vijayapura Dist., Karnataka. **Published at:** At No.14, Silk City, Near Varasiddi Vinayaka Temple, Atalatti Link Road, Vijayapura -586102, Vijayapura Dist., Karnataka..**Editor :** INDUSHEKHAR MANUR